# ಕರುನಾಡ ಸೊಗಡು

## (2)










https://honalu.net

# ಮುನ್ನುಡಿ

ಕರ್ನಾಟಕವು ಹಲತನಗಳ ತವರೂರು. ಹಬ್ಬಗಳು, ಜಾತ್ರೆಗಳು, ಪೂಜೆ, ಜಾನಪದ ಆಚರಣೆಗಳು, ಸಾಂಪ್ರದಾಯಿಕ ಆಟೋಟಗಳು, ಬುಡಕಟ್ಟಿನ ಆಚರಣೆಗಳು - ಹೀಗೆ ಬರೆಯುತ್ತಾ ಹೋದರೆ ಪುಟಗಳೇ ಸಾಲದು. ಒಂದೊಂದು ಊರು ಒಂದೊಂದು ಬಗೆಯ ನಡೆ-ನುಡಿಗೆ ಹೆಸರು. ನಮ್ಮ ಸೊಗಡಿನ ನಡೆ-ನುಡಿಯನ್ನು ಸಾರುವ ಹಲವಾರು ಬರಹಗಳು ಹೊನಲಿನಲ್ಲಿ ಮೂಡಿಬಂದಿವೆ. ಅವುಗಳಲ್ಲಿ ಹಲವು ಬರಹಗಳನ್ನು ಆಯ್ದು 'ಕರುನಾಡ ಸೊಗಡು - 1' ಎಂಬ ಮಿನ್ನೋದುಗೆಯನ್ನು ಈಗಾಗಲೇ ಹೊರಬಿಡಲಾಗಿದೆ. ಈಗ ಅದರ ಮುಂದಿನ ಕಂತಾಗಿ 'ಕರುನಾಡ ಸೊಗಡು - 2' ಎಂಬ ಹೆಸರಿನಲ್ಲಿ ಈ ಮಿನ್ನೋದುಗೆಯನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ.. ಓದಿ, ನಿಮ್ಮ ಗೆಳೆತಿಯರು, ಗೆಳೆಯರು ಹಾಗು ನೆಂಟರೊಂದಿಗೆ ಹಂಚಿಕೊಳ್ಳಿ.

**- ಹೊನಲು ತಂಡ**

# ತಿಳಿಸುವಿಕೆ:

ಈ ಹೊತ್ತಗೆಯಲ್ಲಿರುವ ಎಲ್ಲಾ ಬರಹಗಳ ಹಕ್ಕುಗಳು ಬರಹಗಾರರು ಮತ್ತು ಹೊನಲು ತಂಡಕ್ಕೆ ಸೇರಿವೆ. ಬರಹಗಳ ಆಯ್ದ ಬಾಗವನ್ನು ಇಲ್ಲವೇ ಇಡೀ ಬರಹವನ್ನು ಬೇರೆ ಕಡೆ ಬಳಸಿಕೊಳ್ಳಲು ಬಯಸುವವರು ಬರಹದಲ್ಲಿ ಇಲ್ಲವೇ ಲಿಪಿಯಲ್ಲಿ ಯಾವುದೇ ಮಾರ್‍ಪಾಡುಗಳನ್ನು ಮಾಡದೇ, ಬರಹಗಾರರ ಹೆಸರನ್ನು ಮತ್ತು ಹೊನಲು ಮಿಂಬಾಗಿಲಿನಿಂದ (**honalu.net**) ಪಡೆದುಕೊಳ್ಳಲಾಗಿದೆ ಎಂದು ತಿಳಿಸುತ್ತಾ ಬಳಸಿಕೊಳ್ಳಬಹುದು. ಬರಹಗಳಲ್ಲಿ ಬಳಸಿರುವ ಚಿತ್ರಗಳ ಸೆಲೆಗಳನ್ನು ಆಯಾ ಬರಹದ ಕೆಳಗಡೆ ಕೊಡಲಾಗಿದ್ದು, ಅವುಗಳ ಹಕ್ಕುಗಳು ಆ ಸೆಲೆಗಳದ್ದಾಗಿರುತ್ತದೆ.

**ಮುಂಪುಟ ಕಟ್ಟಣೆ** **:** ರತೀಶ ರತ್ನಾಕರ

**ಹೊರಹೊಮ್ಮಿಕೆ** **:** 15.01.2017

**ಮಿಂಬಲೆಯ ವಿಳಾಸ** : https://honalu.net/

**ಮಿಂಚೆ** : minche@honalu.net

# ಒಳನೋಟ


ಜಾನಪದ ಸೊಗಡಿನ ಸೋಮನ' ಕುಣಿತ' ........................................ 5
ಹಟ್ಟಿ ಹಬ್ಬ ಬುಡಕಟ್ಟು ಆಚರಣೆಯ - ಕುರುಹು ........................................ 15
ಗಣಪನನ್ನು ಹುಡುಕುವ ಜೋಕುಮಾರ : ಜನಪದ ಆಚರಣೆಯ ಕುರುಹು ........................ 18
ನಮ್ಮೂರಿನ ಬೆಳಕಿನ ಹಬ್ಬದ ಸೊಗಡು ........................................ 20
ಹಿತಾರು ಬುಡಕಟ್ಟು ನಡೆನುಡಿಯ - ಕುರುಹು ........................................ 29
ಕರಗ : ನಮ್ಮ ಬೆಂಗಳೂರ ದೊಡ್ಡ ಹಬ್ಬ ........................................ 33
ಹೂವಿನ ಕರಗ : ಬೆಂಗಳೂರು ಕರಗದಲ್ಲೊಂದು ಬಾಗ ........................................ 39
ಅಂಬಾರಿಯ ಕತೆ, ಆನೆಗಳ ತಯಾರಿ, ಜಂಬೂಸವಾರಿ! ........................................ 41
ಯುಗಾದಿ : ಹೊಸತಿಗೆ ಮುನ್ನುಡಿ ........................................ 45
ಸುಗ್ಗಿ ನಮ್ಮಲ್ಲೊಂದು - ಒಕ್ಕಲಾಟ ........................................ 47

# ಜಾನಪದ ಸೊಗಡಿನ ‘ಸೋಮನ ಕುಣಿತ’

– ದೇವರಾಜ್ ಮುದಿಗೆರೆ.

ನಮ್ಮ ಮೂಲ, ನಮ್ಮತನಗಳ ಬೆನ್ನಟ್ಟಿ ಹೊರಟಾಗ ನಮಗೆ ತಿಳಿಯುವುದು ಜನಪದ-ದ್ರಾವಿಡತನ, ಜನರು ಆಗಿನ ಕಾಲಕ್ಕೆ ಅನುಗುಣವಾಗಿ ತಮಗೆ ಬೇಕಾದ ರೀತಿಯಲ್ಲಿ ಕಟ್ಟಿಕೊಂಡದ್ದೇ ಜನಪದ. ಸೋಮನ ಕುಣಿತ ಜನಪದದ ಒಂದು ಪ್ರಮುಕ ಕಲೆ, ನಮ್ಮ ಹಿರಿಯರಿಂದ ಕೊಡಲ್ಪಟ್ಟ ಅತ್ಯದ್ಬುತ ಕೊಡುಗೆಗಳಲ್ಲಿ ಇದೂ ಒಂದು. ಈ ಕುಣಿತವು ಹುಟ್ಟಿದ್ದು ದೈವ ಶಕ್ತಿಯ ಜೊತೆಯಾಗಿ, ಗ್ರಾಮದೇವತೆಯ ಅಂಗರಕ್ಶಣೆಗಾಗಿ ಎಂದು ಬಹಳಶ್ಟು ಕುತೂಹಲಕಾರಿ ಕತೆಗಳಿವೆ. ಇದನ್ನು ಕೆಲವು ಕಡೆ ಚೆನ್ನಾಗಿ ಪಾಲನೆ ಮಾಡಿಕೊಂಡು ಬಂದಿದ್ದಾರೆ, ಕೆಲವು ಕಡೆ ಕುಣಿತ ಗೊತ್ತಿಲ್ಲದೆ ಆಚರಣೆ ನಿಂತು ಹೋಗಿದೆ, ಇನ್ನು ಕೆಲವು ಕಡೆ ಸರಿಯಾದ ರೀತಿಯಲ್ಲಿ ಪಾಲನೆ ಮಾಡಲು ಆಗದೆ ಆಕರ್ಶಣೆ ಕಳೆದುಕೊಳ್ಳುತ್ತಿದೆ. ತುಮಕೂರು, ಚಿತ್ರದುರ್ಗ, ಮಂಡ್ಯ, ಹಾಸನ, ಮಯ್ಸೂರು, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹಿಂದೆ ಗ್ರಾಮ ದೇವತೆ ಇದ್ದ ಊರಿನಲ್ಲೆಲ್ಲಾ ಸೋಮಗಳು ಇದ್ದವು. ಕಾಲಾಂತರದಲ್ಲಿ ಗುಡಿ ಹಾಳಾಗಿಯೋ, ಸೋಮಗಳು ಹಾಳಾಗಿಯೋ, ಮತ್ತೆ ಮಾಡಿಸದೆಯೋ, ಕಲೆಯನ್ನು ಅರಿಯದೆಯೋ, ಹಳ್ಳಿಗಳು ನಾಶವಾಗಿಯೋ ಸೋಮನ ಕುಣಿತ ನಿಂತು ಹೋಗಿರಬಹುದು.

ಇಂದಿಗೂ ಸೋಮನ ಕುಣಿತಕ್ಕೆ ಬಹಳ ಪ್ರಸಿದ್ದವಾದದ್ದು **ತುಮಕೂರು** ಜಿಲ್ಲೆ, ಅದರಲ್ಲೂ ತುರುವೇಕೆರೆಯ ಉಡುಸಲಮ್ಮ ಮತ್ತು ದಂಡಿನಶಿವರದ ಹೊನ್ನಮ್ಮ ದೇವಿಯ ಸೋಮಗಳು ಬಹಳ ಪ್ರಸಿದ್ದಿ ಪಡೆದಿವೆ. ಪ್ರತಿ ಹಬ್ಬದಲ್ಲೂ ಸೋಮನ ಕುಣಿತ ವಿಶೇಶತೆಯಾದ್ದರಿಂದ ನಮಗೆಲ್ಲ ಚಿಕ್ಕಂದಿನಿಂದಲೂ ಚಿರಪರಿಚಿತ. ತುಮಕೂರು ಜಿಲ್ಲೆಯ ಸುಮಾರು ಹಳ್ಳಿಗಳಲ್ಲಿ ಸೋಮನ ಕುಣಿತವನ್ನು ಕಾಣಬಹುದು. ದಂಡಿನಶಿವರದ ಹೊನ್ನಮ್ಮ ದೇವಿಯ ಸೋಮ ಇದೆಲ್ಲಕ್ಕೂ ವಿಬಿನ್ನ, ಇಲ್ಲಿಯ ಸೋಮಗಳನ್ನು ಕುರುಡು ಸೋಮಗಳೆಂತಲೂ ಕರೆಯುತ್ತಾರೆ, ಈ ಸೋಮಗಳು ಕುಣಿಯೋದು ಮದ್ಯ ರಾತ್ರಿ ಮಾತ್ರ, ಈ ಸೋಮಗಳಿಗೆ ಕೋಳಿ ಕೂಗೋದು ಮತ್ತು ಒಳ ಕಲ್ಲು ಅರೆಯೋದು ಕೇಳಿಸಬಾರದು ಅನ್ನುವ ನಂಬಿಕೆ ಈಗಲೂ ಇದೆ.




ಒಂದು ದಂತ ಕತೆಯಂತೆ ಒಂದೂರಿನ ಹೆಣ್ಣು ಮಗಳನ್ನು ಇನ್ನೊಂದು ಊರಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ, ಅದೊಂದು ದಿನ ಅವಳನ್ನು ತನ್ನ ತವರು ಮನೆಗೆ ಕಳಿಸುವ ಸಲುವಾಗಿ ಮಾವನು ಜೊತೆಯಲ್ಲಿ ಹೋಗಿರುತ್ತಾನೆ. ದಾರಿ ಮದ್ಯದಲ್ಲಿ ಆಕೆಗೆ ಜಲಬಾದೆ ಕಾಣಿಸಿಕೊಳ್ಳುತ್ತದೆ, ಆಗ ಎತ್ತಿನ ಗಾಡಿಯನ್ನು ನಿಲ್ಲಿಸಲು ಹೇಳಿ ತಾನು ಮೂತ್ರ ವಿಸರ್ಜಿಸಿ ಬರುವುದಾಗಿಯೂ, ತಾನು ಹಿಂತಿರುಗುವವರೆಗೆ ತಿರುಗಿ ನೋಡದಂತಿರಲು ಮಾವನಿಗೆ ತಿಳಿಸಿ ಹುತ್ತದ ಮರೆಗೆ ಹೋಗುತ್ತಾಳೆ. ತುಂಬಾ ಹೊತ್ತಾದರೂ ಬಾರದ ಸೊಸೆಗಾಗಿ ಮಾವ ತಿರುಗಿ ನೋಡುತ್ತಾನೆ, ಇದರಿಂದ ಅವಮಾನಿತಳಾದ ಸೊಸೆಯು ಹುತ್ತದ ಕೋವೆಯೊಳಕ್ಕೆ ಹೋಗುತ್ತಾಳೆ. ನೋಡ ನೋಡುತ್ತಿದ್ದಂತೆ ಹುತ್ತದಿಂದ ದೇವತೆಯಾಗಿ ಈಚೆ ಬರುತ್ತಾಳೆ, ಜೊತೆಯಲ್ಲಿ ಇಬ್ಬರು ಬಂಟರು ಬರುತ್ತಾರೆ ಅವರನ್ನೇ 'ಸೋಮ' ಎಂದು ಕರೆದರು ಎಂಬ ಪ್ರತೀತಿಯಿದೆ. ಜನಪದರ ಬಾಯಿಯಲ್ಲಿ ಈ ಸೋಮ ಕೆಲವೊಂದು ಕಡೆ ಸ್ವಾಮ, ಚೋಮ ಆಗಿ ಹೋಗಿದ್ದಾನೆ.


Dev's Clicks
ದೊಡ್ಡಮ್ಮ ದೇವಿ, ಮುದಿಗೆರೆ, ತುರುವೇಕೆರೆ ತಾಲೂಕು

ದಂತ ಕತೆಯನ್ನು ಗಣನೆಗೆ ತೆಗೆದುಕೊಂಡರೆ ಎಲ್ಲ ಊರುಗಳಲ್ಲಿಯೂ ಹೀಗೆ ಆಗಿತ್ತು ಎಂದು ಹೇಳಲಾಗುವುದಿಲ್ಲ, ಜಾನಪದವೇ ಹಾಗೆ ಜನರಿಂದ ಹುಟ್ಟಿದ್ದು. ಒಂದು ಊರಿನಲ್ಲಿ ಆಚರಿಸಿದ್ದನ್ನು ಮತ್ತೊಂದು ಊರಿನ ಜನ ಅನುಸರಿಸಿರಬಹುದು, ಊರಿನ ಹುಟ್ಟಿನಲ್ಲೇ ಇದನ್ನು ನಡೆಸಿಕೊಂಡು ಬಂದಿರಬಹುದು, ಊರಿಂದ ಊರಿಗೆ ಗುಳೆ ಹೋದ ಜನ ಅಲ್ಲಿಯೂ ಅದನ್ನು ಮುಂದುವರಿಸಿರಬಹುದು, ಸುಗ್ಗಿ ಕಾಲ ಮುಗಿದ ಮೇಲೆ, ಯುಗಾದಿ-ಮುಂಗಾರು ಮಳೆಯ ನಡುವಿನ ಬೇಸಿಗೆಯ ಬಿಡುವಿನ ಸಮಯದಲ್ಲಿ ಊರಿನ ದೇವರ ಹಬ್ಬ ಮಾಡಿ ಸಂಭ್ರಮಾಚರಣೆಗೆ, ಮನರಂಜನೆಗೆ ಮಾಡಿಕೊಂಡದ್ದು ಆಗಿರಬಹುದು. ತಮ್ಮ ರಕ್ಶಣೆಗಾಗಿ ದೇವಿಯ ಆರಾದಕರಾದವರು ಇದನ್ನು ಜಾರಿಗೆ ತಂದಿರಲುಬಹುದು. ಕರಾವಳಿ ಪ್ರದೇಶದಲ್ಲಿ ಬೂತಾರಾದನೆ ಇರುವ ಹಾಗೆ, ಬೆಂಗಳೂರಿನ ಸುತ್ತ ಮುತ್ತ ಕರಗ ಉತ್ಸವ ಇರುವ ಹಾಗೆ ಒಂದೊಂದು ಪ್ರದೇಶದಲ್ಲಿ ಒಂದೊಂದು ಕಲೆಯನ್ನೋ / ಆರಾದನೆಯನ್ನೋ ಆಚರಿಸಿಕೊಂಡು ಬಂದಿದ್ದಾರೆ ನಮ್ಮ ಹಿರಿಯರು.

ಸೋಮಗಳು ಗ್ರಾಮದೇವತೆಯ ಬಂಟರು, ಅಂಗರಕ್ಶಕರು, ಕುರಿ, ದನ ಇತ್ಯಾದಿ ಪ್ರಾಣಿಗಳಿಗೆ ಯಾವುದೇ ಕಾಯಿಲೆ ಬರದಂತೆ ತಡೆಯುವವರು ಎಂಬ ನಂಬಿಕೆಯ ನೆಲೆಗಟ್ಟಿನ ಮೇಲೆ ಮುಂದುವರೆದುಕೊಂಡು ಬಂದಿದೆ. ಸಾಮಾನ್ಯವಾಗಿ 2 ಸೋಮಗಳಿರುತ್ತವೆ, ಕೆಲವೊಂದು ಕಡೆ 3 ಸೋಮಗಳಿರುವುದು ಉಂಟು. ಕೆಂಪು, ಹಳದಿ, ಕಪ್ಪು, ಹಸಿರು ಬಣ್ಣದ ಸೋಮಗಳಿವೆ. ಕೆಂಪು ಬಣ್ಣದ ಸೋಮಕ್ಕೆ ದೂತರಾಯ-ಪಾಪಣ್ಣ-ಕೆಂಪಣ್ಣ-ಕೆಂಪರಾಯ ಎಂತಲೂ, ಹಳದಿ ಬಣ್ಣದ ಸೋಮಕ್ಕೆ ಕೆಂಚರಾಯ-ಈರಣ್ಣ-ಕೆಂಚಣ್ಣ ಎಂತಲೂ, ಕಪ್ಪು ಬಣ್ಣದ ಸೋಮಕ್ಕೆ ಕರಿಯಣ್ಣ ಎಂತಲೂ ಕರೆಯುತ್ತಾರೆ. ಸೋಮಗಳಿರುವ ಕಡೆಯಲ್ಲಿ ಕೆಂಚರಾಯ-ದೂತರಾಯ/ಈರಣ್ಣ-ಪಾಪಣ್ಣ ಜೋಡಿಯಾಗಿ ಇರುತ್ತವೆ, ಕೆಲವೊಂದು ಕಡೆ ಇವೆರಡರ ಜೊತೆಗೆ ಒಂದು ಕಪ್ಪು ಅತವಾ ಹಸಿರು ಸೋಮ ಇರುತ್ತದೆ. ಎಲ್ಲಿಯೂ ಒಂಟಿ ಸೋಮ ಇರುವ ಉದಾಹರಣೆಗಳಿಲ್ಲ.



ಈ ಸೋಮನ ಮುಕವಾಡಗಳನ್ನು ದೇವ ಬೂತಾಳೆ/ರಕ್ತ ಬೂತಾಳೆ ಮರದಿಂದ ಮಾತ್ರ ತಯಾರಿಸುತ್ತಾರೆ. ಈ ಸೋಮಗಳನ್ನು ತಯಾರು ಮಾಡುವ ವಿದಾನವೇ ಬೇರೆ, ಎಲ್ಲ ಗೊಂಬೆಗಳಂತೆ ಇದನ್ನು ಯಾರ್‍ಯಾರೋ ತಯಾರಿಸುವುದಿಲ್ಲ, ಹಿಂದಿನಿಂದ ಮಾಡಿಕೊಂಡು ಬಂದ ವಂಶಜರೋ ಅತವಾ ಕೆಲವೇ ಕೆಲವು ವಿಶ್ವಕರ್‍ಮಿಗಳು ಮಾತ್ರ ಇದನ್ನು ತಯಾರಿಸುತ್ತಾರೆ, ಕಾರಣ ಇದನ್ನು ತಯಾರಿಸುವಾಗ ಅವರು ಪಾಲಿಸುವ ನಿರ್‍ದಿಶ್ಟ ವಿದಿ ವಿದಾನಗಳು. ನನಗೆ ತಿಳಿದಿರುವ ಹಾಗೆ ತುಮಕೂರಿನ ಕೋಟೆ ಆಂಜನೇಯ ದೇವಸ್ತಾನದ ಪಕ್ಕದ ಬೀದಿಯಲ್ಲಿ, ತುಮಕೂರು ಜಿಲ್ಲೆ ತುರುವೇಕೆರೆ ತಾಲೂಕಿನ ಮುನಿಯೂರಿನಲ್ಲಿ, ವಡಕೆಗಟ್ಟದಲ್ಲಿ, ಗುಬ್ಬಿ ಮತ್ತು ಸಿರಾಗಳಲ್ಲಿ ತಲಾ ಒಂದೊಂದು ಮನೆತನದವರು ಮಾಡುತ್ತಾರೆ.

ಅಗಲವಾದ ಹಣೆ, ವಿಶಾಲವಾದ ಕಿವಿ-ಕಣ್ಣುಗಳು, ದೊಡ್ಡ ಮೂಗು, ಬಾಚಿ ಹಲ್ಲು, ಕೋರೆಹಲ್ಲುಗಳ ಮುಕವಾಡವನ್ನು ಮರದಿಂದ ಕೆತ್ತಿದ ಮೇಲೆ ಅದನ್ನು ನಯಗೊಳಿಸುತ್ತಾರೆ. ಮುಕವಾಡದ ರೂಪ ಬಯ-ಬಕ್ತಿಗಳ ಪ್ರತೀಕವಾಗುವಂತೆ ಬಣ್ಣ ಬಳಿಯುತ್ತಾರೆ. ಮುಕವಾಡದಲ್ಲಿ ತಲೆಯನ್ನು ತೂರಿಸಿ ಅದನ್ನು ಹೊತ್ತು ಕುಣಿಯಲು ನಿಂತ ವ್ಯಕ್ತಿಗೆ ಹೊರಗಿನ ಪರಿಸರ ಕಾಣುವಂತೆ, ಮುಕವಾಡದ ಮೂಗಿನ ಹೊಳ್ಳೆಗಳಿಗೂ ಹೊರುವವನ ಕಣ್ಣಿಗೂ ಹೊಂದಿಕೆಯಾಗುವಂತೆ ಏರ್‍ಪಾಡು ಇರುತ್ತದೆ. ಮುಕವಾಡದ ಮೇಲೆ ದೊಡ್ಡದಾದ, ಪ್ರಬಾವಳಿಯಂತೆ ಕಾಣುವ, ಬಣ್ಣದ ಬಟ್ಟೆಯಿಂದ ಸಿಂಗರಿಸಲು ಅನುವಾಗುವಂತೆ ಬಿದಿರಿನ ಕಡ್ಡಿಗಳ ಕಮಾನು ಕಟ್ಟುತ್ತಾರೆ. ಗ್ರಾಮದೇವತೆಯ ವಿವಿದ ಬಣ್ಣಗಳ ಸೀರೆಗಳನ್ನು ಪ್ರಬಾವಳಿಯಿಂದ ಕೆಳಕ್ಕೆ, ಸೋಮ ಹೊರುವವರ ಹಿಂದಿನ ಶರೀರ ಕಾಣಿಸದಂತೆ ಇಳಿಬಿಟ್ಟಿರುತ್ತಾರೆ.

ಸುಮಾರು ಬಣ್ಣದ ವಿವಿದ ಸೀರೆಗಳು ಸೋಮನನ್ನು ಹೊರುವವರ ಕಾಲುಗಳವರೆಗೆ ಎರಡೂ ಬುಜಗಳ ಪಕ್ಕದಲ್ಲಿ ಇಳಿ ಬೀಳುವಂತೆ ಕಟ್ಟಿರುತ್ತಾರೆ. ಪ್ರಬಾವಳಿಯ ಮೇಲೆಲ್ಲ ಗಮಲು ಬೀರುವ ಹೊಂಬಾಳೆ,ಕೆಂಪು ಕಣಗಿಲೆ,ಕಾಕಟ,ದಾಸವಾಳ ಇತ್ಯಾದಿ ನಾನಾ ತರದ ಹೂವುಗಳಿಂದ ಅಲಂಕಾರ ಮಾಡಲಾಗುತ್ತದೆ.




*ದೂತರಾಯ ಮತ್ತು ಕೆಂಚರಾಯ*

**ಕೆಂಚರಾಯ** – ಸಾತ್ವಿಕ ಮೂರುತಿ, ಹಣೆಯಲ್ಲಿ ಅಡ್ಡವಾಗಿ ಬಳಿದ ವಿಬೂತಿಯಿರುತ್ತದೆ. ಹಳದಿ ಸೋಮನನ್ನು ಹೆಣ್ಣು ಸೋಮವೆಂದು ಕೆಲವು ಕಡೆ ಹೇಳುತ್ತಾರೆ, ಕಾರಣ ಹೆಂಗಸರು ಕೆನ್ನೆಗೆ ಅರಿಶಿನ ಬಳಿಯುವುದರ ಸಲುವಾಗಿ ಇರಬಹುದು.

**ದೂತರಾಯ** – ರೌದ್ರ ಮೂರುತಿ, ಹಣೆಯಲ್ಲಿ ಉದ್ದನೆಯ 3 ಕೆಂಪು-ಬಿಳಿ ನಾಮಗಳಿರುತ್ತವೆ. ಕಪ್ಪು ಮತ್ತು ಹಸಿರು ಬಣ್ಣದ ಸೋಮಗಳ ಮುಕದ ಚಿತ್ತಾರವು ದೂತರಾಯನಿಗೆ ಸಮವಾಗಿರುತ್ತದೆ. ಹಣೆಗೆ ನಾಮ/ವಿಬೂತಿ, ಕೋರೆಹಲ್ಲು, ದೊಡ್ಡ ಕಣ್ಣು, ಉದ್ದನೆಯ ಕೊಂಕು ಮೀಸೆ, ಅಗಲವಾದ ಬಾಯಿ, ಉದ್ದನೆಯ ಮೂಗು, ಬಾಗಿ ನಿಂತಿರುವ ಹುಬ್ಬು, ಗಲ್ಲದ ಮೇಲೆ ಚಿಕ್ಕ ಚುಕ್ಕಿ ಚಿತ್ತಾರಗಳಿರುತ್ತವೆ. ಕೆಂಚರಾಯ ಸಾತ್ವಿಕ ಗುಣವುಳ್ಳ ಸೋಮ ಎಂದು ಹೇಳಿದರೂ ಕೆಲವೊಂದು ಬಾರಿ ದೂತರಾಯನಿಗಿಂತಲೂ ರುದ್ರಾವತಾರಿಯಾಗುತ್ತಾನೆ.

**ಸೋಮನ ವೇಶದಾರಿ**



ಸಾಮಾನ್ಯವಾಗಿ ಗ್ರಾಮದೇವತೆಯ ಪೂಜಾರಿ ಮನೆತನದವರು ಸೋಮನನ್ನು ಹೊರುವವರು. ಇವರು ಸಿದ್ದವಾಗುವ ವಿದಾನವೇ ಚೆಂದ, ದೇವರಿಗೆ ಹರಕೆಯಾಗಿ ಬಂದ ಸೀರೆಗಳನ್ನೇ ಇವರು ದರಿಸುತ್ತಾರೆ, ಸಣ್ಣ ನೆರಿಗೆಗಳ ಸಮೇತ ಸೆರಗಿಲ್ಲದೆ ಪಂಚೆಯ/ಲಂಗದ ತರಹ ಸೀರೆಯನ್ನುಟ್ಟು ಸೊಂಟದ ಸುತ್ತ ಬಟ್ಟೆಯೊಂದನ್ನು ಸುತ್ತುತ್ತಾರೆ, ತಲೆಯ ಮೇಲೆ ಸಿಂಬಿಯ ಹಾಗೆ ಸುತ್ತು ಕಟ್ಟುತ್ತಾರೆ, ಕಾಲಿಗೆ ಗೆಜ್ಜೆ, ಕೈಗಳಿಗೆ ಕಡಗ, ಕೊರಳಿನಲ್ಲಿ ಸರದೊಂದಿಗೆ ದೇವರ ಮುದ್ರೆಯಿರುವ ತಾಳಿಯನ್ನು ಎದೆಯ ಮದ್ಯದಲ್ಲಿ ರಾರಾಜಿಸುವಂತೆ ಇಳಿಬಿಟ್ಟು ಅಲಂಕಾರಗೊಳ್ಳುತ್ತಾರೆ.

ಅಲಂಕಾರ ಮಾಡಿದ ಸೋಮನನ್ನು ನೋಡಲು 2 ಕಣ್ಣು ಸಾಲದು, ಆ ಬಾವ ಬಕ್ತಿಗಳೇ ಬೇರೆ. ಸೋಮನ ಕುಣಿಯುವ ವ್ಯಕ್ತಿ, ಕೈಯಲ್ಲಿ ನೀಳವಾದ ಬೆತ್ತ/ನವಿಲು ಗರಿಯ ಗುಚ್ಚವನ್ನು ಹಿಡಿದು, ದೇವತೆಯನ್ನು ತನ್ನಲ್ಲಿಯೇ ನಿವೇದಿಸಿಕೊಂಡು ಒಂದಾಗುವ ಮನೋಬಾವದಿಂದ ಸೋಮನನ್ನು ಹೊರುವ ಹೊತ್ತಿಗೆ, ಅರೆ-ವಾದ್ಯ-ತಮಟೆ-ದೋಣು-ನಗಾರಿಗಳ ತಾಳದ ಜೊತೆಗೆ ಪದಗಾರನೊಬ್ಬ ಜನರಿಂದಲೇ ರಚಿತವಾದ ಸೋಮನ ಪದಗಳನ್ನು ಹಾಡುತ್ತಾನೆ. ಸೋಮನನ್ನು ಹೊರುವವರು ಉದ್ದನೆಯ ವ್ಯಕ್ತಿಯಾಗಿದ್ದಲ್ಲಿ ಅದರ ಅಂದವನ್ನು ನೋಡಿಯೇ ಅನುಬವಿಸಬೇಕು. ನಾನು ಕಂಡ ಹಾಗೆ ನಮ್ಮ ತುರುವೇಕೆರೆ ತಾಲೂಕಿನಲ್ಲಿ ನಾವು ಚಿಕ್ಕವರಿದ್ದಾಗ ತುರುವೇಕೆರೆ, ಕಾಡಸೂರು, ಹುಲಿಕಲ್ ಮತ್ತು ಗೋಣಿ ತುಮಕೂರಿನಲ್ಲಿ ಉದ್ದನೆಯ ವ್ಯಕ್ತಿಗಳಿದ್ದರು. ಆ ಗಳಿಗೆಗೆ, ಆ ಗೆಜ್ಜೆಯ ಸದ್ದಿಗೆ, ವಾದ್ಯದ ನಾದಕ್ಕೆ, ತಮಟೆಯ ತಾಳಕ್ಕೆ, ಸೋಮನ ಉಗ್ರ ರೂಪಕ್ಕೆ ಎಂತವರ ಎದೆಯು ಜಲ್ಲೆಂದು ಹೋಗುತ್ತದೆ, ಕುಣಿಯುತ್ತ ಬರುವ ಸೋಮ ಹತ್ತಿರ ಹತ್ತಿರ ಆಗುತ್ತಿದ್ದಂತೆ ನಾವು ದೂರ ಸರಿಯುತ್ತಿದುದು ಉಂಟು. ಈಗ ಅದರ ಪಕ್ಕದಲ್ಲೇ ನಿಂತು ಆನಂದಿಸುತ್ತೇವೆ, ನಮ್ಮೊಳಗೆ ಬೆರೆತು ಹೋಗಿದೆ.

ಜನರೇ ಕಟ್ಟಿದ ಜನಪದವಾದ ಸೋಮನ ಪದಗಳಲ್ಲಿ ಕುತೂಹಲಕಾರಿ ಅಂಶಗಳಿವೆ, ಊರಿನ ದೇವತೆಗೆ ಕೆಂಪಮ್ಮ, ದೊಡ್ಡಮ್ಮ ಅತವಾ ಆ ಊರಿನ ಹೆಸರಿನ ಜೊತೆಗೆ ಅಮ್ಮ ಎಂದು ಸೇರಿಸುತ್ತಾರೆ. ಸೋಮನ ಪದಗಳು ಇದರೊಟ್ಟಿಗೆ ಬೆಳೆದು ಬಂದಿವೆ. ಅದಕ್ಕೆ ತಕ್ಕನಾಗಿ ಹೊಂದುವ ಹಾಗೆ ಸೋಮನ ಪದಗಳನ್ನು ಕಟ್ಟಿರುತ್ತಾರೆ.

ನಮ್ಮೂರಿನ ಗ್ರಾಮ ದೇವತೆ ದೊಡ್ಡಮ್ಮನ ಕುರಿತಾಗಿ ಕಟ್ಟಿರುವ ಪದಗಳಲ್ಲಿ ಒಂದಾದ:

ಮೂಗುತಿ ಮುಂಭಾರ, ಹಣೆಗಟ್ಟು ಹಿಂಭಾರ
ದೊಡ್ಡಂಚಿನ ಸೀರೆ ಉಡುಬಾರೆ। ದೊಡ್ಡಮ್ಮ
ನಿನ್ನ ನಡು ಸಣ್ಣ||

ಕನ್ನಡ-ಕನ್ನಡಿಗರ ಬಗ್ಗೆ 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಿ ಮತಿಗಳ್' ಎಂದು ಹೇಳಿರುವುದು ಇಂತ ಕಾರಣಗಳಿಗಾಗಿಯೇ. ಅಕ್ಶರ ಬರೆಯಲು ಗೊತ್ತಿಲ್ಲದ ಸಾಮಾನ್ಯ ಜನರ ಬಾಯಿಂದ ಎಂತ ಕಾವ್ಯ ಪ್ರಯೋಗಗಳು ಆಗಿದೆ ಅನ್ನುವುದಕ್ಕೆ ಇದೆ ಉದಾಹರಣೆ.

ಊರಿನ ದೇವರ ಹೆಸರು ಕೆಂಪಮ್ಮ ಎಂತಾದರೆ,

ಅಮ್ಮನ ನುಡಿಸುತ್ತ ಘಮ್ಮನ ದೇವಮ್ಮ
ಗಂಡುಭೂತಾಳೆ ಗಜನಿಂಬೆ। ಮರದಡಿ
ದಂಡು ಬಿಟ್ಟವಳೆ ಕೆಂಪವ್ವ||

ಕಾಡಸೂರಿನ ಕೆಂಪಮ್ಮ-ಮುದಿಗೆರೆ ದೊಡ್ಡಮ್ಮನ ಕುರಿತು,

ಆ ತೇರು, ಈ ತೇರು ಕಾಡ್ಸೂರವ್ವನ ತೇರು
ದೊಡ್ಡವ್ವ ಕಳಿಸವ್ವ ಹೊಸ ತೇರು |
ದೊಡ್ಡವ್ವ ಕಳಿಸಿದ ಹೊಸ ತೇರು ಹರಿವಾಗ
ಆಕಾಶದಾ ಗಂಟೆ ನುಡಿದ್ಯಾವೋ||

ಹಬ್ಬದ ಸಮಯದಲ್ಲಿ ಊರಿನ ಹೆಂಗಳೆಯರು ಹೊತ್ತು ತರುವ ಆರತಿಯ ಕುರಿತು,

ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗೀಯ
ಜಲ್ಲ ಜಲ್ಲಾನೆ ಉದುರಮ್ಮ | ನಮ್ಮನೆಯ
ಬೆಲ್ಲದಾರುತಿಯ ಬೆಳಗೇವು ||

ದೂತರಾಯ ರಸಿಕನೆಂಬ ಕಲ್ಪನೆ ಇರುವ ಕಡೆಗಳಲ್ಲಿ ಅದಕ್ಕನುಗುಣವಾದ ಪದಗಳನ್ನೇ ಹಾಡುತ್ತಾರೆ.

ಏರಿ ಮೇಲೋಗೋರು ಏಳು ಜನ ಸೂಳೇರು
ಯಾರಿಗೆ ಕಣ್ಣ ಇಟ್ಟಾರು | ನಮ್ಮ ತೇರಿಗೆ
ಮಾಲೆ ಬಿಡುವ ದೂತಯ್ಯಗೆ ಕಣ್ಣ ಇಟ್ಟಾರು ||




ಸೋಮನ ಉಗಮದ ಬಗ್ಗೆ ನಿರ್ದಿಶ್ಟವಾದ ಮಾಹಿತಿಗಳಿಲ್ಲ. ಗೊ.ರು.ಚನ್ನಬಸಪ್ಪನವರು ಮಾತ್ರ ಇದರ ಬಗ್ಗೆ ಒಂದು ಮಟ್ಟದ ಸಂಶೋದನೆಯನ್ನು ಮಾಡಿದ್ದಾರೆಯೇ ಹೊರತು ಬೇರೆ ಎಲ್ಲಿಯೂ ಮಾಹಿತಿ ದೊರಕುವುದಿಲ್ಲ. ಬೇರೆ ಬೇರೆ ಪ್ರದೇಶಗಳಲ್ಲಿ ಬಿನ್ನ ಬಿನ್ನ ಕತೆಗಳು ಸಿಕ್ಕುತ್ತವೆ. ಅವರೇ ಹೇಳುವ ಪ್ರಕಾರ "ಮೂರು ನಾಲ್ಕು ಜಿಲ್ಲೆಗಳಲ್ಲಿ ಪ್ರಚಲಿತವಿದ್ದರೂ ಈ ಕಲೆಗೆ ಸಂಬಂದಿಸಿದಂತೆ ಇರುವ ದಾರ್ಮಿಕ ಕಲ್ಪನೆ ಮತ್ತು ಅಚಲವಾದ ಶ್ರದ್ದೆ ಮೆಚ್ಚುವಂತಹದು. ಬೇರೆ ಊರಿನ ಆಹ್ವಾನದ ಮೇಲೆ ಜಾತ್ರೆ ಉತ್ಸವಗಳಿಗೆ ಸೋಮನ ಕುಣಿತಕ್ಕೆ ಹೋಗಬೇಕಾದರೂ ದೇವಿಯ ಅಪ್ಪಣೆ ಕೇಳಿ ಒಪ್ಪಿಗೆ ನೀಡಿದ ನಂತರವೇ ಹೋಗುವುದು. ಒಟ್ಟಿನಲ್ಲಿ ಸಾಂಪ್ರದಾಯಿಕ ಹಿನ್ನಲೆಯಲ್ಲಿ, ದಾರ್ಮಿಕ ಪರಿವೇಶದಲ್ಲ ಬೆಳೆದು ಬಂದಿರುವ ಸೋಮನ ಕುಣಿತ ಜನಪದ ಕಲೆಗಳಲ್ಲಿ ಒಂದು ಗಂಡುಕಲೆ ಎಂದು ಹೇಳಬಹುದು.

ಜನಪದದ ಸೊಗಡು ಇಶ್ಟವಾಗುವುದು ಇಂತಹ ಆಚರಣೆಗಳಿಂದಲೇ. ಊರಿನ ಪ್ರಮುಕ ಹಬ್ಬಗಳಲ್ಲಿ ಸೋಮನ ಕುಣಿತ ಸಾಮಾನ್ಯವಾಗಿ ಇದ್ದೆ ಇರುತ್ತದೆ, ಗ್ರಾಮ ದೇವತೆ ಗುಡಿಯಿಂದ ಹೊರಗೆ ಹೊರಟಾಗೆಲ್ಲ ಸೋಮಗಳು ಜೊತೆಯಾಗಿ ಹೊರಡುವುದು ಸರ್ವೇ ಸಾಮಾನ್ಯ. ಊರೆಲ್ಲ ಮೆರವಣಿಗೆ ಮಾಡಿ ಮುಗಿದ ಮೇಲೆ ಸೋಮಗಳು ಗುಡಿದುಂಬುವುದು ಒಂದು ವಿಶೇಶ ಸಮಯ ಮತ್ತು ರೋಮಾಂಚನಕಾರಿ. ಕೆಲವೊಂದು ಸಲ ಗುಡಿದುಂಬಿಸುವಾಗ ದೂತರಾಯನಿಗೆ ಕೋಳಿ ಬಲಿ ಕೊಡುವುದೂ ಉಂಟು. ಬಹಳ ಹೊತ್ತು ಸೋಮ ಹೊತ್ತ ಕಾರಣ ರಕ್ತ ಬೂತಾಳೆ ತಲೆ ಹಿಡಿಯುತ್ತದೆ, ಎಶ್ಟೇ ಬಲ ಹಾಕಿದರು ಮುಕವಾಡ ತೆಗೆಯಲು ಕಶ್ಟವಾಗುತ್ತದೆ ಎಂಬ ನಂಬಿಕೆ ಇದೆ.

ಎಶ್ಟೋ ವಿಶಯಗಳು ನಂಬಿಕೆಯ ಮೇಲಶ್ಟೇ ಸಾಗುತ್ತಿವೆ, ಪ್ರತಿಯೊಂದಕ್ಕೂ ಉತ್ತರಗಳನ್ನು ಹುಡುಕುತ್ತ ಹೋದರೆ ತರ್ಕಕ್ಕೆ ಸಿಗುವುದಿಲ್ಲ, ನಮ್ಮ ಸಂಸ್ಕ್ರುತಿಯನ್ನು ಕಲಿಯಲು ಹೊರಗಿನಿಂದ ಬೇರೆಯವರು ನಮ್ಮಲ್ಲಿ ಬರುತ್ತಿದ್ದಾರೆ, ನಾವೇ ನಮ್ಮ ಆಚರಣೆಗಳನ್ನು ಕೈ ಬಿಟ್ಟರೆ ನಮ್ಮತನ ಕಳೆದುಕೊಳ್ಳುತ್ತೇವೆ. ಸೋಮನ ಕುಣಿತ ಒಂದು ಸಂಬ್ರಮದ ಆಚರಣೆ ಕೂಡ

ಹೌದು. ಅದೆಷ್ಟೋ ಶಾಸ್ತ್ರ ಸಂಪ್ರದಾಯಗಳು ಸಂಬ್ರಮಕ್ಕೆ ಕಂಡುಕೊಂಡದ್ದು. ಇತ್ತೀಚೆಗೆ ಯಾವ ಕಾರಣವೋ ಏನೋ ಕೆಲವೊಂದು ಬದಲಾಗುತ್ತಿದೆ !!!. ಮೊನ್ನೆ ಹೀಗೆ ಮಂಡ್ಯ ಕಡೆಯ ಹಳ್ಳಿಯೊಂದರ ಗೆಳೆಯನೊಬ್ಬನನ್ನು'ನಿಮ್ಮೂರಲ್ಲಿ ಸೋಮನ ಕುಣಿತ ಮಾಡ್ತಾರಾ' ಅಂತ ಕೇಳಿದ್ದಕ್ಕೆ 'ಹಬ್ಬನೇ ಸರಿಯಾಗಿ ಮಾಡಲ್ಲ, ಇನ್ನು ಕುಣಿತ ಎಲ್ಲಿ ಮಾಡ್ತಾರೆ' ಅನ್ನೋ ಉತ್ತರ ಬಂತು, ಹೀಗೆ ಕೆಲವೊಂದು ಕಡೆ ಕುಣಿತ ಬಾರದೆ ನಿಲ್ಲಿಸಿದ್ದಾರೆ.

ಆದುನಿಕತೆ, ಪಾಶ್ಚಿಮಾತ್ಯತೆ, ವೈಜ್ಞಾನಿಕತೆಗಳ ನಡುವೆ ನಮ್ಮ ಜನಪದರು ಕಟ್ಟಿಕೊಟ್ಟ ಜಾನಪದ ಕಲೆಗಳು ಮರೆಯಾಗುವುದು ಬೇಡ, ಮುಂದಿನ ಪೀಳಿಗೆಗಳಿಗೂ ದಕ್ಕಲಿ, ಜಾನಪದ ಕಲೆಗಳನ್ನು ಪ್ರೋತ್ಸಾಹಿಸೋಣ, ನಮ್ಮ ಹಿರಿಯರು ಕೊಟ್ಟಿದ್ದನ್ನು ಹಾಗೆ ಉಳಿಸಿಕೊಳ್ಳೋಣ. ಸೋಮನ ಪದಗಳು ಬರಹ ರೂಪದಲ್ಲಿ ಸಿಕ್ಕುವುದು ಬಹಳ ವಿರಳ, ಜನರಿಂದ ರಚಿತವಾದ ಜನರ ಬಾಯಿಯಲ್ಲೇ ಇರುವ ಈ ಪದಗಳನ್ನು ಬರಹಕ್ಕೆ ಇಳಿಸುವ ಪ್ರಮುಕ ಕೆಲಸವೊಂದು ಆಗಬೇಕಿದೆ.

ಸೋಮನ ಕುಣಿತದ ಸೊಬಗನ್ನು ವೀಡಿಯೋದಲ್ಲಿ ಸೆರೆಹಿಡಿಯುವ ಪ್ರಯತ್ನವನ್ನು ನಾನು ಮಾಡಿರುವೆ ಅದರ ಕೆಲವು ವೀಡಿಯೋ ತುಣುಕುಗಳು ಇಲ್ಲಿವೆ ನೋಡಿ.

https://youtu.be/CbJHAS12yoA

https://youtu.be/4f7tl79yy9c

https://youtu.be/dPGCBu-v9sE

https://youtu.be/9T1n6ILIp10

***(ಚಿತ್ರ ಹಾಗು ವೀಡಿಯೋ ಸೆಲೆ: ದೇವರಾಜ್ ಮುದಿಗೆರೆ)***

# ಹಟ್ಟಿ ಹಬ್ಬ – ಬುಡಕಟ್ಟು ಆಚರಣೆಯ ಕುರುಹು

– ಚಂದ್ರಗೌಡ ಕುಲಕರ್ಣಿ.



ನಮ್ಮ ಬದುಕು ಪರಂಪರೆಯ ವಿಶಿಷ್ಟವಾದ ಪಳೆಯುಳಿಕೆಗಳನ್ನು ಒಳಗೊಂಡು ಗತಿಶೀಲ ನಡೆಯಲ್ಲಿ ಮುನ್ನಡೆಯುತ್ತದೆ. ಬೇರೆ ಬೇರೆ ಕಾಲಗಟ್ಟಗಳ ಪ್ರದಾನ ಅಂಶಗಳನ್ನು ಆಚರಣೆಯ ಸ್ವರೂಪದಲ್ಲಿ ಜೀವಂತವಾಗಿರಿಸಿ ಕೊಂಡಿರುತ್ತದೆ. ಇಂತಹ ಚಲನ ಶೀಲ ಬದುಕನ್ನು, ಅಲ್ಲಿ ಬರುವ ಆಚರಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಮಾತ್ರ ಪರಂಪರೆಯ ದಿಟ ಸ್ವರೂಪ ಗೋಚರಿಸುತ್ತದೆ.

## ಹಟ್ಟಿ ಹಬ್ಬದ ಆಚರಣೆಯಲ್ಲಿ ಬುಡಕಟ್ಟು ಮತ್ತು ಕ್ರುಶಿ ಸಂಸ್ಕ್ರುತಿಯ ದಿಟವಾದ ಪಳೆಯುಳಿಕೆಗಳಿವೆ.

ಹಟ್ಟಿ ಎಂಬ ಪದವು ಬುಡಕಟ್ಟು ಜನಸಮುದಾಯದ ನೆಲೆ ಎಂಬ ಅರ‍್ತಹೊಂದಿದೆ. ಕುರಿಸಾಕಣೆ, ಪಶುಸಾಕಣೆ ಮಾಡುತ್ತಿದ್ದ ಮಾನವ ವರುಶದಲ್ಲಿ ಒಂದು ಸಲ ಒಂದೆಡೆ ಸೇರುತ್ತಿದ್ದ. ಹಲವು ಸಮುದಾಯಗಳಲ್ಲಿ ಹರಡಿ ಹೋದವರು ಅಂದು ತಪ್ಪದೇ ಕೂಡುತ್ತಿದ್ದರು. ತಮ್ಮ ಪಶುವಿಗೆ ರೋಗ ರುಜಿನ ಬರದಂತೆ ಕಾಪಾಡೆಂದು ದೈವ ಶಕ್ತಿಯನ್ನು ಬೇಡಿಕೊಳ್ಳುತ್ತಿದ್ದರು. ಅನಂತರ ಕಾಲದಲ್ಲಿ ಕ್ರುಶಿ ಮಾಡುವುದನ್ನು ಕಲಿತ. ಒಂದೆಡೆ ನೆಲೆ ನಿಲ್ಲಹತ್ತಿದ. ತನ್ನ ಸುರಕ್ಶತೆಗಾಗಿ ಹಟ್ಟಿ ಕಟ್ಟಿಕೊಳ್ಳತೊಡಗಿದ. ಕುರಿ ಪಶುಗಳಿಗೆ ಹಾಕುವ ದಡ್ಡಿಯಂತೆಯೇ ಮುಳ್ಳ ಬೇಲಿಗಳಿಂದ ಹಟ್ಟಿ ನಿರ‍್ಮಿಸಿದ. ಇನ್ನೂ ಮುಂದುವರೆದು ಮಣ್ಣು ಕಟ್ಟಿಗೆ ಬಳಸಿ ಗೋಡೆಯನ್ನು ಕಟ್ಟತೊಡಗಿದ.

ಹಟ್ಟಿಹಬ್ಬದಲ್ಲಿ ಕೋಟೆಯಾಕಾರದಲ್ಲಿ (ಚೌಕ) ಸಗಣಿಯ ಆಕೃತಿಗಳನ್ನು ಜೋಡಿಸಿ ಒಂದು ಕಡೆ ಬಾಗಿಲು ಬಿಟ್ಟಿರುತ್ತಾರೆ. ಸಗಣಿಯ ಆಕೃತಿಗಳಿಗೆ ಪಾಂಡವರು ಎನ್ನುವರು. ಪಾಂಡವರು ಅಡವಿಯಲ್ಲಿಯೇ ತಮ್ಮ ಕೋಟೆಯನ್ನು ಕಟ್ಟಿಕೊಂಡ ಸಂದರ್ಬ ಬುಡಕಟ್ಟು ನೆಲೆಯನ್ನು ಸೂಚಿಸುತ್ತದೆ. ಮನೆಯ ಒಳಗಿನ ಈ ಕೋಟೆಗೆ ಮತ್ತು ಮನೆ ಬಾಗಿಲ ಮುಂದಿಟ್ಟ ಪಾಂಡವರಿಗೆ ಹೆಜ್ಜೆ ಮೂಲಕ ಸಂಪರ್ಕ ಕಲ್ಪಿಸಿರುತ್ತಾರೆ. ಕೃಶ್ಣ ಇಂದ್ರಪ್ರಸ್ತಕ್ಕೆ ಬಂದ ಸಂಕೇತವೂ ಇಲ್ಲಿ ಸೇರಿದೆ. ಇಲ್ಲಿ ಕೃಶ್ಣ ಮತ್ತು ಗೊಲ್ಲರು ಎಂಬ ಬುಡಕಟ್ಟು ನೆಲೆಯನ್ನು ಕಾಣಬಹುದು. ಸಗಣಿಯ ಆಕೃತಿಗಳು ಪಂಚಬೂತಗಳಾದ ಗಾಳಿ, ಆಕಾಶ, ನೀರು, ಬೆಂಕಿ ಮತ್ತು ಮಣ್ಣಿನ ಪ್ರತೀಕವಾಗಿರಬಹುದು. ಐದು ಅಂಕಿ ಸಾಮ್ಯತೆ ಇರುವುದರಿಂದ ಪಾಂಡವರ ಕತೆಗೆ ಒಳಸಂಬಂದವನ್ನು ಹೊಂದಿರುವುದರಿಂದ ಆ ಹೆಸರು ಬಳಕೆಯಲ್ಲಿ ಬಂದಿರಬಹುದು. ಎಳ್ಳ ಅಮವಾಸ್ಯೆಯ ದಿನ ಬೂಮಿತಾಯಿಯ ಸೀಮಂತ ಕಾರಣವನ್ನು ಮಾಡುವ ರೈತರು ಬನ್ನಿ ಗಿಡದ ಬುಡದಲ್ಲಿ ಐದು ಕಲ್ಲುಗಳನ್ನಿಟ್ಟು ಪೂಜಿಸುತ್ತಾರೆ. ಅಲ್ಲಿ ಐದೂ ಪಂಚಬೂತಗಳನ್ನು ಆರಾದಿಸುವ ನೆಲೆ ಇದೆ.



ಪಾಂಡವರಿಗೆ ಏರಿಸುವ ಹೂ, ಹೊನ್ನಂಬರಿ, ಹೊನ್ನ ಅವರಿ ಮತ್ತು ಉತ್ರಾಣಿ ಕಡ್ಡಿಗಳು ಒಕ್ಕಲಿಗನಿಗೆ ಸಹಜವಾಗಿ ಸಿಗುವ ವಸ್ತುಗಳಿವು. ಹೊನ್ನಂಬರಿ ನಲಿವಿಗೆ, ಉತ್ರಾಣಿ ನೋವಿಗೆ ಸಂಕೇತವಾಗಿರಬಹುದು. ದನಗಳಿಗೆ ರೋಗ ಬರಬಾರದೆಂಬ ಆಶಯದಲ್ಲಿ ಅಂಟೋಳಿ-ಪಂಟೋಳಿ ಎಂಬ ಆಚರಣೆಯೂ ರೈತ ಸಮುದಾಯದಲ್ಲಿದೆ.

ಹಂಡ ಆಕಳ
ಬಂಡ ಆಕಳ
ಗುಡದನ್ನ ಹೋರಿ ಮೇದಿರಬೇಕ
ಮಡ್ಯಾಗ ಬಂದು ಈದಿರಬೇಕ
ಮಾರ ಮಾರ ಹುಲ್ಲು, ಜೋರು ಜೋರು ಹಾಲು
ಜೋರು ಜೋರು ಹಾಲಿಗೆ ಕೆನಿ ಕೆನಿ ಮೊಸರು,
ಕೆನಿ ಕೆನಿ ಮೊಸರಿಗೆ ಗಮ ಗಮ ತುಪ್ಪ
ಗಮ ಗಮ ತುಪ್ಪಕ್ಕ ಬಳ್ಳ ಬಳ್ಳ ರೊಕ್ಕ
ಅಂಟಿಗೊ ಪಂಟಿಗೊ
ಎಣ್ಣಿ ರೊಟ್ಟಿ ಗಾಣಿಗೊ
ರೊಟ್ಟಿ ಬುತ್ತಿ ಜಾಣಿಗೊ
ನಿಮ್ಮ ಎತ್ತಿನ ಪೀಡ ಹೊಳಿಯಾಚೆಗೊ
ನಿಮ್ಮ ಆಕಳ ಪೀಡ ಹೊಳಿಯಾಚೆಗೊ

ಯುವಕರು ಹಣಜಿ ಹುಲ್ಲಿನ ನಾಗಪ್ಪನ ಹೆಡೆ ಮಾಡಿ, ಹೆಡೆ ನಡುವೆ ದೀಪದ ಪಣತಿ ಹಚ್ಚಿ, ತಲೆ ಮೇಲೆ ಹೊತ್ತು ಮನೆ ಮನೆಗೆ ಹಟ್ಟಿ ಹಟ್ಟಿಗೆ ಹೋಗಿ ಈ ಹಾಡು ಹಾಡಿ ಸಂತಸಪಡುವರು.

## ಪಾಂಡವರನ್ನು ಸಗಣಿಯಿಂದಲೇ ಮಾಡುವುದು ಯಾಕೆ?

ಸಗಣಿ ಸಹಜವಾಗಿ ಸಿಗುವ ವಸ್ತು, ಪೂಜನೀಯವೂ ಹೌದು. ಪಾಂಡವರ ಆಕಾರ ಮೇಟಿ ಸುತ್ತಲಿನ ರಾಶಿಯಂತೆ, ಮೊದಲ ರೈತ ಗಣಪತಿಯಂತೆ ಇರುವುದನ್ನೂ ಗಮನಿಸಬೇಕು. ಮುಂಜಾನೆ ತಲೆಬಾಗಿಲ ಮುಂದೆ ಮತ್ತು ಮನೆಯ ಒಳಗೆ ಹಕ್ಕಿಯ ಹತ್ತಿರ ಇರಿಸಿದ ಪಾಂಡವರನ್ನು ಸಾಯಂಕಾಲ ಮಾಳಿಗೆಯ ಮೇಲೆ ಕುಂಬಿಯಲ್ಲಿ ಸಾಲಾಗಿ ಜೋಡಿಸುವರು. ತೊಟ್ಟಿಲನ್ನು ಮಾಡುವ ವಿದಾನ ಬಳಕೆಯಲ್ಲಿದೆ. ಪಾಂಡವರಿಗೆ ಬೆಳಕು ಮಾಡಲು ಎತ್ತರದ ಕಂಬ ನೆಡಿಸಿ ಶಿವನ ಪುಟ್ಟಿಯನ್ನು ಏರಿಸುತ್ತಾರೆ. ಇದೇ ಸಂದರ್ಬದಲ್ಲಿ ಆಕಾಶ ಪುಟ್ಟಿಯನ್ನೂ ಮಾಡಿ ಹಾರಿಸುತ್ತಾರೆ.

ಮಾನವನ ನಾಗರಿಕತೆಯ ಹಾದಿಯಲ್ಲಿ ಪುರಾಣ ಕಾಲಕ್ಕಿಂತಲೂ ಮೊದಲು ಬುಡಕಟ್ಟು ಜನರ ಹಬ್ಬ ತನ್ನ ಪಳಯುಳಿಕೆಯನ್ನು ಈಗಲೂ ಜೀವಂತವಾಗಿರಿಸಿಕೊಂಡಿದೆ. ನಾಗರಿಕತೆ ಬೆಳೆದಂತೆ ಪುರಾಣದ ಅಂಶಗಳು ಸೇರಿಕೊಂಡಿವೆ. ಅದೇ ರೀತಿ ವರ್ತಕರ ಹಬ್ಬವಾಗಿ ಪರಿವರ್ತನೆ ಹೊಂದುತ್ತ ಸಾಗುತ್ತಲಿದೆ. ಜಾನಪದವು ಪುರಾಣಕ್ಕೆ ಪ್ರೇರಣೆ ನೀಡಿರುತ್ತದೆ. ಮತ್ತೊಮ್ಮೆ ಪುರಾಣದಿಂದ ಅನೇಕ ಸಂಗತಿಗಳನ್ನು ಜಾನಪದ ಮರಳಿ ಪಡೆಯುತ್ತದೆ.

***(ಚಿತ್ರ ಸೆಲೆ:*** *ಉದಯವಾಣಿ)*

# ಗಣಪನನ್ನು ಹುಡುಕುವ ಜೋಕುಮಾರ : ಜನಪದ ಆಚರಣೆಯ ಕುರುಹು

– ಚಂದ್ರಗೌಡ ಕುಲಕರ್ಣಿ.



ನಮ್ಮ ಬೇಸಾಯ ಪರಂಪರೆಯಲ್ಲಿ ಮಳೆದೇವರೆಂದು ಕರೆಸಿಕೊಳ್ಳುವ ಜೋಕುಮಾರ ಸಮ್ರುದ್ಧಿಯ ಸಂಕೇತವಾಗಿದ್ದಾನೆ. ಸ್ರುಶ್ಟಿಯ ಮೂಲ, ಪುರುಶ ಅಂಗ ರೂಪದ ಜೋಕುಮಾರನನ್ನು ಕುಂಬಾರ ತಯಾರಿಸಿಕೊಡುತ್ತಾನೆ. ಬೆತ್ತದ ಬುಟ್ಟಿಯಲ್ಲಿ ಬೇವಿನ ತಪ್ಪಲ ಮದ್ಯದಲ್ಲಿ ಅಲಂಕ್ರುತನಾದ ಜೋಕುಮಾರನನ್ನು ಚಿಕ್ಕ ಮಕ್ಕಳು ನೋಡಬಾರದೆಂದು ದೂರ ಸರಿಸುತ್ತಾರೆ. ಜೋಕುಮಾರನ ಬಾಯಿಗೆ ಬೆಣ್ಣೆ ಹಚ್ಚಿರುತ್ತಾರೆ. ಬಾರಿಕೇರ ತಾಯಂದಿರು ಮನೆ ಮನೆಗೆ ಹೊತ್ತು ತರುತ್ತಾರೆ. ಬಕ್ತರು ಮೊರದಲ್ಲಿ ಉಪ್ಪು ,ಮೆಣಸಿನಕಾಯಿ, ಜೋಳ ಮತ್ತು ರೊಟ್ಟಿ ಕೊಟ್ಟು ಗೌರವಿಸುತ್ತಾರೆ. ಅಂಬಲಿ ಪ್ರಸಾದವನ್ನು ಔಡಲ ಎಲೆಯಲ್ಲಿ ನೀಡುತ್ತಾರೆ. ಜೊತೆಗೆ ಅಂಗಾರವನ್ನು(ಬೂದಿ) ನೀಡುತ್ತಾರೆ. ಅಂಗಾರವನ್ನು ಬಿತ್ತುವ ಬೀಜದಲ್ಲಿಯೂ, ಅಂಬಲಿ ಪ್ರಸಾದವನ್ನು ಹೊಲದಲ್ಲಿಯೂ ಬೆರಸಿ ಸಮ್ರುದ್ಧಿಗಾಗಿ ಬೇಡಿಕೊಳ್ಳುತ್ತಾರೆ.

ರೈತರ ಪರವಾಗಿ ಹೋರಾಡಿದ, ತಾನೇ ರೈತನಾಗಿದ್ದ ಗಣಪ ಉಳ್ಳ ಬಕ್ತರ ಮನೆ ಊಟಕ್ಕೆ ಮಾರುಹೊಗಿ ಬೋಗ ಸಂಸ್ಕ್ರುತಿಯ ಪ್ರತೀಕವಾಗುತ್ತಾನೆ. ದುಡಿವ ಪಕ್ಶದಿಂದ ಕುಳಿತು ಉಣ್ಣುವ ಪಕ್ಶಕ್ಕೆ ವರ್‍ಗಾವಣೆಗೊಳ್ಳುತ್ತಾನೆ. ಆಗ ರೈತ ಮುಕಂಡನಾದ ಜೋಕುಮಾರ ಗಣಪನ ಮೇಲೆ ಸಿಟ್ಟಿಗೆದ್ದು ಉಳ್ಳವರ ಮನೆಯಲ್ಲಿ ಹುಡುಕುತ್ತಾನೆ. ಉಳ್ಳವರು ಗಣಪನನ್ನು ಮನೆಯಲ್ಲಿರಿಸಿಕೊಂಡು ಇಲ್ಲವೆಂದು ಸುಳ್ಳು ಹೇಳುತ್ತಾರೆ. ಒಮ್ಮೊಮ್ಮೆ ಗಣಪ, ಜೋಕುಮಾರನ ಕೈಯಿಂದ ತಪ್ಪಿಸಿಕೊಳ್ಳಲು ಮಾರುವೇಶ ದರಿಸಿ ಇಲ್ಲವೇ ಮುಕವಾಡ(ಆನೆ) ದರಿಸಿ ಓಡಾಡುತ್ತಾನೆ. ಕೊನೆಗೂ ಒಮ್ಮೆ ಗಣಪ ಸಿಕ್ಕಿ ಬೀಳುತ್ತಾನೆ.

ಇಂತಹ ರೈತ ನಾಯಕ ನಮಗೆ ಬೇಡವೆಂದು ಜೋಕುಮಾರನ ಮುಕಂಡತ್ವದಲ್ಲಿ ಸೇರಿದ ಎಲ್ಲ ರೈತರು ಗಣಪನನ್ನು ಹೆಗಲಮೇಲೆ ಹೊತ್ತು ಮೆರವಣಿಗೆ ಮಾಡುತ್ತ, ಮದ್ದು ಸುಡುತ್ತ ಹೊಳೆ ಕಾಣಿಸುತ್ತಾರೆ. ಈಗಲೂ ಜೋಕುಮಾರ ಮನೆಗೆ



ಬಂದಾಗ ಗಣಪನನ್ನು ಇರಿಸಿದ ಮಾಡನ್ನು ಪರದೆಯಿಂದ ಮುಚ್ಚುವ ಪದ್ಧತಿ ಇದೆ. ಇದು ಅಂದಿನ ಗಟನೆಯನ್ನು ಪಳಯುಳಿಕೆಯಾಗಿಸಿಕೊಂಡ ರೂಪಕ.

*ಅಡ್ಡಡ್ಡ ಮಳಿಬಂದು ದೊಡ್ಡದೊಡ್ಡಾ ಕೆರಿತುಂಬಿ*
*ಗೊಡ್ಡುಗಳೆಲ್ಲ ಹಯನಾಗಿ ಜೋಕುಮಾರ|*
*ಗೊಡ್ಡುಗಳೆಲ್ಲ ಹಯನಾದಿ ಜೋಕುಮಾರ*
*ಗೌಡ ಶೆಡ್ಡಿಯ ಮ್ಯಾಲ ಸಿರಿಬಂದ ಜೋಕುಮಾರ |*

ಈ ಪದ್ಯದಲ್ಲಿ ಮಳೆ ಬಂದು ಬೂಮಿ ಬೆಳೆ ಬೆಳೆಯಿತೆಂಬ ಮಾತಿನ ಜೊತೆಗೆ ಗೊಡ್ಡುಗಳೆಲ್ಲ ಹಯನಾಗಿ ಎಂಬ ವಿಶೇಶವೂ ಇದೆ. ಗೊಡ್ಡು ಎಂದರೆ ಬಂಜೆ ಎಂದರ್ತ. ಜೋಕುಮಾರ ಕ್ರುಪಾ ದ್ರುಶ್ಟಿ ಬಿದ್ದರೆ ಬಂಜೆತನ ದೂರವಾಗುತ್ತದೆ. ಇಂತ ಸಾಲುಗಳನ್ನು ಸಲ್ಪ ಆಳವಾಗಿ ನೋಡಿದಾಗ, ಜನಪದದ ನಿಜ ದರ್ಶನವಾಗುತ್ತದೆ.

ಪೌರಾಣಿಕ ಅಂಶಗಳಿಗಿಂತ ಜಾನಪದೀಯ ಅಂಶಗಳು ಜೋಕುಮಾರನನ್ನು ಲಿಂಗದ ಸಂಕೇತ, ಸ್ರುಶ್ಟಿ ಸಮ್ರುದ್ದಿಯ ಸಂಕೇತವೆಂದು ನಿರೂಪಿಸುತ್ತವೆ. ಮಕ್ಕಳಾಗದವರು ಗುಪ್ತವಾಗಿಯೇ ಜೋಕುಮಾರನನ್ನು ಪೂಜಿಸಿ ಸಂತಾನ ನೀಡುವಂತೆ ಬೇಡಿಕೊಳ್ಳುತ್ತಾರೆ. ರೈತನ ಆರಾದ್ಯ ದೈವವಾದ ಜೋಕುಮಾರ ಮಳೆ ತಂದೇ ತರುತ್ತಾನೆ ಎಂಬ ನಂಬಿಕೆ ಇದೆ. ಗಣಪತಿ ಬೂಲೋಕದ ಸಂಕಶ್ಟವನ್ನು ಶಿವ ಪಾರ್ವತಿಯರಿಗೆ ಹೇಳುವುದನ್ನು ಮರೆಯಬಹುದು. ಏಕೆಂದರೆ ಗಣಪ ಉಳ್ಳ ಬಕ್ತರ ಮನೆಯಲ್ಲಿ ಮೋದಕ ತಿಂದು ನಿಜವಾದ ಗೋಳನ್ನು ಗಮನಿಸುವುದಿಲ್ಲ. ಆದರೆ ಜೋಕುಮಾರ ಹಾಗಲ್ಲ. ಇಲ್ಲಿಯ ಪರಿಸ್ತಿತಿಯನ್ನು ತಂದೆ ತಾಯಿಗೆ ಮನವರಿಕೆ ಮಾಡಿಕೊಟ್ಟು ತಪ್ಪದೇ ಮಳೆ ತರಿಸುತ್ತಾನೆ.

ಈ ವರುಶ ಕನ್ನಡ ನಾಡು ಗಣಪನ ಹಬ್ಬದ ದಿನವೇ ದೊಡ್ಡ ಗಂಡಾಂತರಕ್ಕೆ ಸಿಲುಕಿಕೊಂಡಿತು. ಮಳೆ ಬರದೆ ಸಂಕಶ್ಟದಲ್ಲಿದ್ದ ನಮಗೆ ಇದ್ದ ಅಲ್ಪ ಸ್ವಲ್ಪ ನೀರನ್ನು ತಮಿಳುನಾಡಿಗೆ ಹರಿಸಬೇಕಾದ ದುರ್ಬರ ಸ್ತಿತಿ ಬಂತು. ಈಗ ನಮ್ಮ ಮಳೆ ದೇವರು, ರೈತರ ಹಿತೈಶಿ ಜೋಕುಮಾರ ಮಳೆ ಸುರಿಸಿ ನಮ್ಮನ್ನು ಸಂಕಶ್ಟದಿಂದ ಪಾರುಮಾಡಲಿ. ಮತ್ತು ನಮ್ಮ ರಾಜಕಾರಣಿಗಳಿಗೆ ನಮ್ಮ ನೆಲ ಜಲದ ಕುರಿತು ಹೋರಾಡುವ ಬಲ ಕೊಡಲಿ.

***( ಚಿತ್ರ ಸೆಲೆ: ಬರಹಗಾರರ ಆಯ್ಕೆ, kannadajaanapada.blogspot.in )***

# ನಮ್ಮೂರಿನ ಬೆಳಕಿನ ಹಬ್ಬದ ಸೊಗಡು

– ರತೀಶ ರತ್ನಾಕರ.



ನಾಡಿನುದ್ದಕ್ಕೂ ಆಚರಿಸುವ ದೊಡ್ಡ ಹಬ್ಬಗಳಲ್ಲಿ ಬೆಳಕಿನ ಹಬ್ಬ ದೀಪಾವಳಿಯೂ ಒಂದು. ಸಾಲು ಸಾಲು ದೀಪಗಳು, ಹೂವು-ಹಸಿರು ತೋರಣಗಳು, ಸಿಡಿಮದ್ದುಗಳು, ಹೊಸಬಟ್ಟೆ ಹಾಗೂ ಬಗೆಬಗೆಯ ಹಬ್ಬದ ಅಡುಗೆಗಳು… ಇವು ಬೆಳಕಿನ ಹಬ್ಬದಲ್ಲಿ ಸಾಮಾನ್ಯವಾಗಿ ಕಂಡುಬರುವಂತವು. ಇವುಗಳಶ್ಟೇ ಅಲ್ಲದೆ ನಾಡಿನ ಉದ್ದಗಲದಲ್ಲಿ ಈ ಬೆಳಕಿನ ಹಬ್ಬದ ಆಚರಣೆಯಲ್ಲಿ ಹಲತನವಿದೆ. ಅದಕ್ಕೆ ಒಂದು ಸಣ್ಣ ಎತ್ತುಗೆ ಎಂದರೆ, ಕರ್‍ನಾಟಕದ ಬಡಗಣದಲ್ಲಿ ಹಟ್ಟಿಹಬ್ಬ, ಕರಾವಳಿ ಹಾಗು ಮಲೆನಾಡಿನಲ್ಲಿ ತುಳಸಿ ದೀಪ ಮತ್ತು ಪಂಜಿನ ಹಬ್ಬಗಳನ್ನು ದೀಪಾವಳಿಯಾಗಿ ಆಚರಿಸುತ್ತಾರೆ. ಅದರಂತೆ ಚಿಕ್ಕಮಗಳೂರು ಜಿಲ್ಲೆಯ ಆಲ್ದೂರಿನ ಹತ್ತಿರದಲ್ಲಿರುವ ನಮ್ಮೂರಿನ ದೀಪಾವಳಿ ಆಚರಣೆಯೂ ಕರ್‍ನಾಟಕದ ಉಳಿದ ಬಾಗದ ಆಚರಣೆಗಿಂತ ಹಲವಾರು ಬಗೆಯಲ್ಲಿ ಬೇರೆಯಾಗಿದೆ. ಇಲ್ಲಿನ ಆಚರಣೆಯ ಒಂದು ಕಿರುನೋಟ ಇಲ್ಲಿದೆ.

## ಲಕ್ಕೆ ಹಬ್ಬ:



*ಲಕ್ಕೆ ಹಾಕಲು ಬಳಸುವ ಗಿಡಗಳನ್ನು ಪೂಜೆ ಮಾಡುತ್ತಿರುವುದು*

ಇದು ದೀಪಾವಳಿ ಹಬ್ಬದ ಮೊದಲ ದಿನ. ನಮ್ಮ ಸುತ್ತಮುತ್ತ ಸಿಗುವ ಮುಂಡುಗದ ಗಿಡ, ಲಕ್ಕೆ ಸೊಪ್ಪು, ಉತ್ರಾಣಿ ಕಡ್ಡಿ, ಚೆಂಡು ಹೂವಿನ ಗಿಡ ಹಾಗು ಬತ್ತದ ತೆನೆಗಳನ್ನು ತಂದು ಮನೆಯ ಎದುರುಗಿರುವ ತುಳಸಿ ಕಟ್ಟೆ ಇಲ್ಲವೇ ಮನೆಯ ಜಗುಲಿಯಲ್ಲಿ ಪೂಜೆಗೆ ಇಟ್ಟುಕೊಳ್ಳಲಾಗುವುದು (ಬತ್ತವನ್ನು ಬೆಳೆಯುವವರು ಮಾತ್ರ ಬತ್ತದ ತೆನೆಯನ್ನು ತಂದುಕೊಳ್ಳುವರು). ಇದರ ಪೂಜೆಗೆ ನೆನೆಯಕ್ಕಿ-ನೆನೆಗಡ್ಲೆಯನ್ನು ಮಾಡಲಾಗುವುದು. ಒಂದು ಹಿಡಿ ಅಕ್ಕಿ ಹಾಗು ಕಡ್ಲೆಕಾಳನ್ನು ಕೊಂಚಹೊತ್ತು ನೀರಿನಲ್ಲಿ ನೆನಸಿಟ್ಟು, ಬಳಿಕ ಅದನ್ನು ತೆಗೆದು ಬೆಲ್ಲದ ಪುಡಿಯನ್ನು ಸೇರಿಸಿದರೆ ನೆನೆಯಕ್ಕಿ-ನೆನೆಗಡ್ಲೆ ಸಿದ್ಧವಾದಂತೆ. ಇದನ್ನು ಗಿಡಗಳ ರಾಶಿಯ ಎದುರಿಗಿಟ್ಟು ಮನೆಯ ಹಿರಿಯರು ಪೂಜೆಯನ್ನು ಮಾಡುವರು. ಈ ದಿನದಂದು ಮನೆಯಲ್ಲೊಬ್ಬರು ಉಪವಾಸ ಇರುವುದು ವಾಡಿಕೆ (ಎಳನೀರು, ಹಣ್ಣು ಹಾಗು ಸೌತೆಕಾಯಿಗಳನ್ನು ತಿನ್ನಬಹುದು). ಉಪವಾಸ ಇದ್ದವರು ಈ ದಿನದ ಪೂಜೆಗಳನ್ನು ಮಾಡುವರು.

ಪೂಜೆ ಮುಗಿಸಿದ ಮೇಲೆ ಮುಂಡುಗ, ಲಕ್ಕೆ ಸೊಪ್ಪು, ಉತ್ರಾಣಿ ಕಡ್ಡಿ, ಚೆಂಡು ಹೂವಿನ ಗಿಡ ಹಾಗು ಬತ್ತದ ತೆನೆಯ ಒಂದೊಂದು ಎಳೆಯನ್ನು ಸೇರಿಸಿ ಹಲವಾರು ಕಟ್ಟುಗಳನ್ನಾಗಿ ಮಾಡಲಾಗುವುದು. ಈ ಕಟ್ಟುಗಳನ್ನು ಮನೆಯ ಮುಂಬಾಗಿಲು, ಹಿತ್ತಲ ಬಾಗಿಲು, ಗದ್ದೆ, ತೋಟ, ಕೊಟ್ಟಿಗೆ ಹಾಗು ಗೊಬ್ಬರದ ಗುಂಡಿಗಳಿಗೆ ಇಡಲಾಗುವುದು. ಹೀಗೆ ಐದು ಬಗೆಯ ಗಿಡದ ಕಟ್ಟು ಇಡುವುದನ್ನು "ಲಕ್ಕೆ ಹಾಕುವುದು" ಎನ್ನುತ್ತಾರೆ. ಕೆಲವರು "ಮುಂಡುಗ ಇಡುವುದು" ಎಂದೂ ಕರೆಯುತ್ತಾರೆ. ಚೌಡಮ್ಮ, ಪಂಜರವಳ್ಳಿ, ಬೂತಪ್ಪ, ಮುಂತಾದ ಮನೆಯ ದೇವರುಗಳಿಗೆ ಒಂದೊಂದು ವರುಶವೂ ಹರಕೆ ಕೊಡಲೆಂದು ತೋಟದ ನಡುವೆ ಜಾಗವನ್ನು ನಿಗದಿ ಮಾಡಿರಲಾಗುತ್ತದೆ. ಈ ಜಾಗವನ್ನು 'ಚೌಡಮ್ಮನ ಗದಿಗೆ, ಪಂಜರವಳ್ಳಿ ಗದಿಗೆ ಎಂದು ಆಯಾ ದೇವರ ಹೆಸರಿನಿಂದ ಕರೆಯಲಾಗುತ್ತದೆ. ಈ ಎಲ್ಲಾ ಗದಿಗೆಗಳಿಗೂ ಹಬ್ಬದ ಹೊತ್ತಿನಲ್ಲಿ ಲಕ್ಕೆ ಹಾಕಲಾಗುವುದು. ಲಕ್ಕೆ ಹಾಕುವುದನ್ನು ಸಾಮಾನ್ಯವಾಗಿ ಬೆಳಗಿನ ಹೊತ್ತಿಗೆ ಮುಗಿಸುತ್ತಾರೆ.



*ಎಡದಿಂದ ಬಲಕ್ಕೆ - ಚೆಂಡು ಹೂವಿನ ಗಿಡ, ಉತ್ರಾಣಿ ಕಡ್ಡಿ, ಮುಂಡುಗದ ಗಿಡ ಹಾಗೂ ಲಕ್ಕೆ ಸೊಪ್ಪು*

ಸಂಜೆಯ ಹೊತ್ತಿಗೆ ಹಬ್ಬದ ಅಡುಗೆಗಳನ್ನು ಮಾಡಲಾಗುವುದು. ಇದರಲ್ಲಿ ಆರತಿ ಎತ್ತಲು ಅಣಿಮಾಡುವ ಹಣತೆಯನ್ನು ಮಾಡುವುದೇ ಒಂದು ವಿಶೇಶ. ಈ ಹಣತೆಯನ್ನು ಮಾಡಲು, ಮೊದಲು ಅಕ್ಕಿಯನ್ನು ಕೆಲವು ನಿಮಿಶಗಳ ಕಾಲ ನೆನಸಿಟ್ಟು ಬಳಿಕ ಅದರ ನೀರನ್ನು ತೆಗೆದು ಅಕ್ಕಿಯನ್ನು ಕುಟ್ಟಿ ಪುಡಿಮಾಡಿಲಾಗುವುದು. ಪುಡಿಮಾಡಿದ ಅಕ್ಕಿಯನ್ನು ಜರಡಿಯಲ್ಲಿ ಜಲಿಸಿ(ಜಾಲಿಸಿ) ಅದರ ಹಿಟ್ಟನ್ನು ತೆಗೆದು, ಅದಕ್ಕೆ ಬೆಲ್ಲ ಮತ್ತು ಏಲಕ್ಕಿಯನ್ನು ಹಾಕಿ ಮತ್ತೆ ಕುಟ್ಟಲಾಗುವುದು. ಆಗ ಅದು ಅಂಟಂಟಾಗಿ ಹಿಟ್ಟಿನ ಉಂಡೆಯಂತಾಗುತ್ತದೆ. ಇದರಿಂದ ಹಣತೆಯ ಆಕಾರವನ್ನು ಮಾಡಿ ಅದಕ್ಕೆ ತುಪ್ಪ ಇಲ್ಲವೇ ಎಣ್ಣೆಯನ್ನು ಹಾಕಿ, ತಟ್ಟೆಯಲ್ಲಿಟ್ಟು ಸಿಂಗರಿಸಿ ಆರತಿಗೆ ಅಣಿಮಾಡಲಾಗುತ್ತದೆ.



*ಹಿಟ್ಟಿನ ಹಣತೆಯಿಂದ ಅಣಿಯಾದ ಆರತಿ ತಟ್ಟೆ*

ಕತ್ತಲಾಗುತ್ತಿದ್ದಂತೆ ಹಿತಾರಿಗೆ ಇಟ್ಟು ಹಬ್ಬದ ಅಡುಗೆಗಳನ್ನು ಬಡಿಸಲಾಗುವುದು. ಆರತಿ ತಟ್ಟೆಯಲ್ಲಿರುವ ಹಿಟ್ಟಿನ ಹಣತೆಯನ್ನು ಹಚ್ಚಿ, ಮೊದಲು ಮನೆಯಿಂದ ಹೊರಗೆ ತಂದು ಆರತಿಯನ್ನು ಬೆಳಗಲಾಗುವುದು. ಚಿಕ್ಕಮಗಳೂರಿನ ಮುಳ್ಳಯ್ಯನಗಿರಿ ಬೆಟ್ಟಗಳ ಸಾಲಿನಲ್ಲಿರುವ ದೇವಿರಮ್ಮ ನಮ್ಮೆಲ್ಲರ ಆರಾಧ್ಯ ದೈವ. ದೇವಿರಮ್ಮನ ಬೆಟ್ಟದ ದಿಕ್ಕಿನ ಕಡೆ ತಿರುಗಿ ಆ ಬೆಟ್ಟಕ್ಕೆ ಆರತಿ ಎತ್ತಿ, 'ನಮ್ಮೆಲ್ಲರನ್ನು ಹರಸು ತಾಯೇ' ಎಂದು ಬೇಡಲಾಗುವುದು. ಬೆಳಗಿನಿಂದ ಉಪವಾಸ ಇದ್ದವರೇ ಆರತಿಯನ್ನು ಬೆಳಗಬೇಕು. ಬೆಟ್ಟಕ್ಕೆ ಆರತಿ ಎತ್ತಿದ ಮೇಲೆ ಮನೆಯ ಒಳಗಿಟ್ಟ ಹಿತಾರಿಗೆ ಆರತಿಯನ್ನು ಬೆಳಗುತ್ತಾರೆ. ಬಳಿಕ ಮನೆಯಲ್ಲಿರುವ ಎಲ್ಲರೂ ಹಿತಾರಿಗೆ ದೂಪ ಹಾಕಿ ಹಬ್ಬದ ಊಟವನ್ನು ಸವಿಯುತ್ತಾರೆ. ಬೆಳಗಿನಿಂದ ಉಪವಾಸ ಇದ್ದವರು ಹಬ್ಬದ ಊಟವನ್ನು ಮೊದಲುಮಾಡಬೇಕು. ಅಲ್ಲಿಗೇ ಮೊದಲ ದಿನದ ಹಬ್ಬ ಮುಗಿದಂತೆ.



*ಗಿಂಡಿಯ ಹಿತಾರು - ಎರಡು ಎಲೆಗಳಲ್ಲಿ ಎಡೆಯನ್ನಿಟ್ಟು ಪೂಜೆ ಮಾಡಿರುವುದು*

## ಎರಡನೇ ದಿನ ಅಂಗಡಿ ಪೂಜೆ:

ಹೆಸರೇ ಹೇಳುವಂತೆ ಇದು ವ್ಯಾಪಾರಿಗಳ ಹಬ್ಬ. ಅಂಗಡಿಗಳನ್ನು ಚೊಕ್ಕಮಾಡಿ ಕಳಶವಿಟ್ಟು ಪೂಜೆಮಾಡಲಾಗುವುದು. ಪೂಜೆ ಮುಗಿದ ಮೇಲೆ ಬಂದ ಗಿರಾಕಿಗಳಿಗೆ ಸಿಹಿ ಹಂಚುತ್ತಾರೆ. ಈ ದಿನ ನಮ್ಮೂರಿನ ಮನೆಯಲ್ಲಿ ಯಾವ ಆಚರಣೆಗಳಿರುವುದಿಲ್ಲ.

## ಮೂರನೇ ದಿನದ ಜಾನುವಾರು ಪೂಜೆ:

ಮನೆಯಲ್ಲಿ ಹಸು ಎತ್ತುಗಳನ್ನು ಸಾಕಿರುವವರು ಅವುಗಳ ಪೂಜೆ ಮಾಡುವರು. ಬೆಳಗ್ಗೆಯೇ ಜಾನುವಾರುಗಳ ಮೈತೊಳೆದು, ಕೊಟ್ಟಿಗೆಯನ್ನು ಚೊಕ್ಕಮಾಡಿ, ಕೊಟ್ಟಿಗೆಗೆ ಹಸಿರು ತೋರಣ ಕಟ್ಟುವರು. ಜೇಡಿಮಣ್ಣು ಹಾಗು ಕೆಮ್ಮಣ್ಣನ್ನು ನೀರಿನಲ್ಲಿ ಕರಗಿಸಿ ಅಕ್ಕಿ ಅಳೆಯಲು ಬಳಸುವ ಪಾವು (ಸಿದ್ದೆ ಎಂದೂ ಕರೆಯುವರು) ತೆಗೆದುಕೊಂಡು, ಪಾವಿನ ಬಾಯನ್ನು ಕರಗಿಸಿಟ್ಟ ನೀರಿಗೆ ಅದ್ದಿ ಜಾನುವಾರಗಳ ಮೈಗೆ ಅಚ್ಚು ಹಾಕಲಾಗುವುದು. ಇದರಿಂದ ಜಾನುವಾರಗಳ ಮೈಯಲ್ಲಿ ಉಂಗುರದ ಆಕಾರದಲ್ಲಿ ಜೇಡಿಮಣ್ಣು ಹಾಗು ಕೆಮ್ಮಣ್ಣಿನ ಬಣ್ಣಗಳು ಮೂಡುವುದು, ಇದನ್ನು 'ಹಂಡುಂಡು' ಎಂದು ಕರೆಯುತ್ತಾರೆ.



ಈ ಹೊತ್ತಿನಲ್ಲಿ ಹಸು ಎತ್ತುಗಳಿಗೆ ಹಾಕುವ ಹಾರ ವಿಶೇಶವಾದದ್ದು. ವೀಳ್ಯದೆಲೆ, ಬಾಳೆಹಣ್ಣು, ಹಲಸಿನ ಸೊಪ್ಪು, ಮಾವಿನ ಸೊಪ್ಪು, ಅಡಿಕೆ ಹಿಂಗಾರ, ಹಸಿ ಅಡಿಕೆ ಕಾಯಿ, ಉತ್ರಾಣಿ ಕಡ್ಡಿ, ಚಕ್ಕೋತ ಸೊಪ್ಪು ಹಾಗೂ ಚಪ್ಪೆ ರೊಟ್ಟಿ (ಉಪ್ಪನ್ನು ಹಾಕದೆ ಬರೀ ಅಕ್ಕಿಹಿಟ್ಟಿನಲ್ಲಿ ಮಾಡಿರುವ ಚಿಕ್ಕ ಚಿಕ್ಕ ರೊಟ್ಟಿಗಳು) ಹೀಗೆ ಒಟ್ಟು ಒಂಬತ್ತು ಬಗೆಯ ವಸ್ತುಗಳನ್ನು ಸೇರಿಸಿ ಹಾರ ಮಾಡಿ ಜಾನುವಾರಗಳ ಕುತ್ತಿಗೆಗೆ ಕಟ್ಟುವರು. ಇದರ ಜೊತೆಗೆ ಒಂದು ಚೆಂಡು ಹೂವಿನ ಹಾರ ಮತ್ತು ಉಗಣೆ ಬಳ್ಳಿಯ (ಮಲೆನಾಡಿನಲ್ಲಿ ಸಿಗುವ ಒಂದು ಬಗೆಯ ಬಳ್ಳಿ) ಹಾರಗಳನ್ನೂ ಹಾಕುತ್ತಾರೆ. ಹಾರಗಳಿಂದ ಸಿಂಗಾರಗೊಂಡ ಜಾನುವಾರಗಳಿಗೆ ಅರಿಸಿನ ಕುಂಕುಮ ಹಚ್ಚಿ ಪೂಜೆ ಮಾಡುವರು. ಪೂಜೆ ಮುಗಿದ ಮೇಲೆ ಜಾನುವಾರುಗಳನ್ನು ಮೇಯಲು ಹೊರಗೆ ಬಿಡುವರು. ಅವು ಸಂಜೆ ಹಿಂದಿರುಗಿ ಬರುವ ಹೊತ್ತಿಗೆ ಕೊಟ್ಟಿಗೆಯ ಬಾಗಿಲಿಗೆ ಒನಕೆಯನ್ನು ಅಡ್ಡಲಾಗಿ ಇಟ್ಟು, ಅವುಗಳನ್ನು ಕೊಟ್ಟಿಗೆಯ ಬಾಗಿಲಲ್ಲೇ ನಿಲ್ಲಿಸಿಕೊಂಡು, ಆರತಿ ಎತ್ತಿ, ಕಣ್ಣು ತೆಗೆದು (ಕುಂಕುಮದ ನೀರು ಹಾಗು ಮಸಿ ನೀರನ್ನು ತಟ್ಟೆಯಲ್ಲಿಟ್ಟು ಹಸುಗಳಿಗೆ ಸುಳಿದು ಆ ನೀರನ್ನು ಹೊರಗೆ ಚೆಲ್ಲುವುದು) ಕೊಟ್ಟಿಗೆಯ ಒಳಗೆ ಬರಮಾಡಿಕೊಳ್ಳಲಾಗುವುದು.

## ಮೂರನೇ ದಿನದ ಪಂಜಿನ ಹಬ್ಬ:



*ಅಣಿಮಾಡಿರುವ ಪಂಜಿನ ಕೋಲುಗಳು*

ಪಂಜಿನ ಕೋಲುಗಳನ್ನು ಮಾಡುವ ಕೆಲಸ ಬೆಳಗಿನಿಂದಲೇ ಮೊದಲಾಗುವುದು. ಒಣಗಿದ ಬಿದಿರು, ಒಣಗಿದ ಅಡಿಕೆ ಮರ, ವಾಟೆ ಬಿದಿರು, ಇಲ್ಲವೇ ಕೆಂದಾಳು ಮರದ ಗೆಲ್ಲುಗಳನ್ನು ತಂದು 4 ರಿಂದ 5 ಅಡಿ ಎತ್ತರದ ಕೋಲುಗಳನ್ನು ಮಾಡಿಕೊಳ್ಳಲಾಗುವುದು. ಹತ್ತಿ ಬಟ್ಟೆಯನ್ನು ಅಂಗೈಯಗಲ ತುಂಡುಗಳನ್ನಾಗಿ ಮಾಡಿ ಹರಳೆಣ್ಣೆಯಲ್ಲಿ ನೆನೆಸಿಕೊಂಡು, ಪಂಜಿನ ಕೋಲಿನ ತುದಿಗೆ ಸುತ್ತಿ, ಒಂದೆರಡು ಚೆಂಡು ಹೂವನ್ನು ಕೋಲಿಗೆ ಸಿಕ್ಕಿಸಿ ಸಿಂಗರಿಸುತ್ತಾರೆ.

ಮನೆಯ ಅಂಗಳದಲ್ಲಿರುವ ತುಳಸಿ ಕಟ್ಟೆಯ ಸುತ್ತ ನಾಲ್ಕು ಚಿಕ್ಕ ಕಂಬಗಳನ್ನಿಟ್ಟು, ಬಿದಿರು ಇಲ್ಲವೇ ಅಡಕೆಯ ದಬ್ಬೆಗಳನ್ನು ಅಡ್ಡಲಾಗಿ ಕಟ್ಟಿ, ಮಣ್ಣಿನ ಹಣತೆಗಳನ್ನಿಡಲು ಆಗುವಂತೆ ಅಣಿಮಾಡಲಾಗುವುದು. ಅಡ್ಡಲಾಗಿರುವ ದಬ್ಬೆಯ ಮೇಲೆ ಹಣತೆಗಳನ್ನು ಸಾಲಾಗಿ ಇಟ್ಟು ಹೂವು, ಮಾವಿನ ತೋರಣ, ಬಾಳೆ ಕಂದು (ಎಳೆಯ ಬಾಳೆ ಗಿಡ) ಹಾಗೂ ರಂಗೋಲಿಯಿಂದ ತುಳಿಸಿ ಕಟ್ಟೆಯನ್ನು ಸಿಂಗರಿಸುತ್ತಾರೆ. ಕಟ್ಟೆಯ ಸುತ್ತ ಪಂಜಿನ ಕೋಲುಗಳನ್ನು ಊರಲಾಗುವುದು. ಮನೆಯ ಹೊರಗೆ ಇಷ್ಟೆಲ್ಲಾ ಕೆಲಸಗಳು ಆಗುತ್ತಿರುವಾಗ ಒಳಗೆ ಹಬ್ಬದ ಅಡುಗೆ ಅಣಿಯಾಗುತ್ತಿರುತ್ತದೆ.



*ತೋಟದಲ್ಲಿ ಹಚ್ಚಿರುವ ಪಂಜು ಹಾಗೂ ಲಕ್ಕೆ*

ಸಂಜೆ ಆಗುತ್ತಿದ್ದಂತೆ ಪಂಜಿನ ಕೋಲುಗಳನ್ನು ತುಳಸಿ ಕಟ್ಟೆಯ ಎದುರಿಗಿಟ್ಟು ಮನೆಯ ಹಿರಿಯರು ಪೂಜೆ ಮಾಡುವರು. ಪಂಜಿನ ಪೂಜೆ ಆದಮೇಲೆ ಪಂಜಿನ ಕೋಲುಗಳನ್ನು ತೆಗೆದುಕೊಂಡು ಮನೆಯ ಮುಂಬಾಗಿಲು, ಹಿಂಬಾಗಿಲು, ಗದ್ದೆ, ತೋಟ ಹೀಗೆ ಮೊದಲ ದಿನದ ಹಬ್ಬದಲ್ಲಿ ಎಲ್ಲೆಲ್ಲಿ ಲಕ್ಕೆ ಹಾಕಿರುತ್ತಾರೋ ಅಲ್ಲೆಲ್ಲಾ ಪಂಜಿನ ಕೋಲುಗಳನ್ನು ನೆಟ್ಟು, ಪಂಜನ್ನು ಹೊತ್ತಿಸಿ, ಕೈ ಮುಗಿದು ಬರಲಾಗುತ್ತದೆ. ಮನೆ, ಗದ್ದೆ ಹಾಗು ತೋಟವನ್ನು ಕೇಡುಗಳಿಂದ ಈ ಲಕ್ಕೆ ಹಾಗು ಪಂಜು ಕಾಪಾಡುವುದು ಎಂಬುದು ನಂಬಿಕೆ. ದೇವರ ಗದಿಗೆಗಳಿಗೆ ಲಕ್ಕೆ ಹಾಗು ಪಂಜನ್ನು ಹಾಕುವುದು ಮನೆಯ ದೇವರಿಗೆ ಗೌರವ ಸೂಚಿಸುವ ಒಂದು ಕ್ರಮವಾಗಿದೆ. ಹಾಗೆಯೇ, ಹಬ್ಬದ ಹೊತ್ತಿನಲ್ಲಿ ಮನೆಯವರು ಗದಿಗೆಯ ದೇವರನ್ನು ಮರೆತರೆ ಆ ದೇವರೂ ಈ ಮನೆ ಕಾಪಾಡುವುದನ್ನು ಮರೆಯುವುದು. ಲಕ್ಕೆ ಮತ್ತು ಪಂಜನ್ನು ಹಾಕಿ ನಮ್ಮನ್ನು ಕಾಪಾಡುವುದನ್ನು ಮರೆಯಬೇಡಿ ಎಂದು ಬೇಡಿಕೊಳ್ಳುವುದಾಗಿದೆ.

ಕತ್ತಲಾಗುತ್ತಿದ್ದಂತೆ ಮನೆಯ ಒಳಗೆ ಹಿತಾರಿಗೆ ಇಟ್ಟು (ಈ ದಿನ ಹಲವಾರು ಮನೆಗಳಲ್ಲಿ ಕೇಲು ಕಂದಲನ್ನು ಹಿತಾರಿಗೆ ಇಡುತ್ತಾರೆ.) 5 ಬಾಳೆಯ ಎಲೆಗಳಲ್ಲಿ ಹಬ್ಬದೂಟವನ್ನು ಬಡಿಸಿ ಎಡೆ ಇಡುವರು. ನಮ್ಮೂರಿನ ಹೆಚ್ಚಿನವರ ಮನೆಯಲ್ಲಿ ಈ ಹಬ್ಬಕ್ಕೆ ಬಾಡೂಟವನ್ನು ಮಾಡುವರು. ಬಾಡೂಟವನ್ನೇ ಹಿತಾರಿನ ಎಡೆಗೆ ಬಡಿಸಲಾಗುವುದು. ಈ ದಿನದಂದು ಕೂಡ ಎರಡು ಹಣತೆಗಳನ್ನು ಬಳಸಿ ಆರತಿ ತಟ್ಟೆಯನ್ನು ಅಣಿಮಾಡಲಾಗುವುದು.



*ಕೇಲು ಕಂದಲಿನ ಹಿತಾರು - ಐದು ಎಲೆಗಳಲ್ಲಿ ಹಬ್ಬದಡುಗೆಯನ್ನು ಬಡಿಸಿರುವುದು*

ಮೊದಲು ಹಿತಾರು ಮತ್ತು ಆರತಿ ತಟ್ಟೆಯ ಹಣತೆಗಳನ್ನು ಹಚ್ಚಿ, ಮನೆಯವರೆಲ್ಲರೂ ಸೇರಿ ತುಳಸಿ ಕಟ್ಟೆಯ ಸುತ್ತಲಿನ ಹಣತೆಗಳು ಹಾಗು ಪಂಜನ್ನು ಹಚ್ಚುವರು. ಆರತಿ ತಟ್ಟೆಯನ್ನು ತಂದು ತುಳಸಿ ಹಾಗು ದೇವಿರಮ್ಮನ ಬೆಟ್ಟದ ಕಡೆಗೆ ಬೆಳಗಿ, ಒಳಗೆ ತೆಗೆದುಕೊಂಡು ಹೋಗಿ ಹಿತಾರಿನ ಎದುರಿಗೆ ಇಡುವರು. ಈ ಹೊತ್ತಿನಲ್ಲಿ ಮನೆಯ ಮುಂದೆಲ್ಲಾ ಬೆಳಗುತ್ತಿರುವ ಹಣತೆಗಳನ್ನು ನೋಡಲು ಕಣ್ಣೆರಡು ಸಾಲದು.



*ಹಣತೆ ಹಾಗೂ ಪಂಜಿನ ಬೆಳಕಿನಿಂದ ಕಂಗೊಳಿಸುವ ತುಳಸಿ ಕಟ್ಟೆ*

ಮನೆಯವರೆಲ್ಲಾ ಹೊರಗಿನ ದೀಪಗಳನ್ನು ನೋಡಿ ನಲಿದ ಮೇಲೆ, ಒಳಬಂದು ಎಲ್ಲರೂ ಹಿತಾರಿಗೆ ಆರತಿಯನ್ನು ಎತ್ತುತ್ತಾರೆ. ಬಳಿಕ ಎಲ್ಲರೂ ಒಟ್ಟಾಗಿ ಊಟಕ್ಕೆ ಕೂರುವರು. ಊಟಕ್ಕೆ ಕುಳಿತವರ ಎದುರಿಗೆ ಒಬ್ಬರು ಆರತಿ ತಟ್ಟೆಯನ್ನು ತಂದು ಹಿಡಿಯುವರು, ಅದಕ್ಕೆ ನಮಸ್ಕರಿಸಿ ಊಟವನ್ನು ಶುರುಮಾಡುತ್ತಾರೆ. ಮೂರು ದಿನಗಳ ಬೆಳಕಿನ ಹಬ್ಬದ ಆಚರಣೆಗೆ ಅಂದು ತೆರೆ ಬೀಳುತ್ತದೆ.

*(**ಚಿತ್ರ ಸೆಲೆ:** srigokarna.org, **ರತೀಶ ರತ್ನಾಕರ**)*

# ಹಿತಾರು – ಬುಡಕಟ್ಟು ನಡೆನುಡಿಯ ಕುರುಹು

– ರತೀಶ ರತ್ನಾಕರ.



*ಹಬ್ಬದಂದು ಇಟ್ಟ ಹಿತಾರು ಎಡೆ*

ಹಿರಿಯರುಗಳೇ ನಮ್ಮ ದೇವರುಗಳು ಎಂಬ ನಂಬಿಕೆ ತುಂಬಾ ಹಿಂದಿನಿಂದಲೂ ಬಂದಿದೆ. ಈ ನಂಬಿಕೆಗೆ ಕನ್ನಡಿ ಹಿಡಿದಂತೆ ನಮ್ಮ ನಡೆ-ನುಡಿಗಳಿರುವುದನ್ನು ಗಮನಿಸಬಹುದು. ಇಂತಹ ನಡೆ-ನುಡಿಗಳಲ್ಲಿ ಒಂದು 'ಹಿತಾರು'. ನಾನು ಗಮನಿಸಿದಂತೆ ಮಲೆನಾಡಿನ ಹೆಚ್ಚಿನ ಮನೆಗಳಲ್ಲಿ ಹಿರಿಯರನ್ನು ಪೂಜಿಸುವ ಪದ್ದತಿಯೇ ಹಿತಾರು.

ಸಾಮಾನ್ಯವಾಗಿ ಹಿತಾರು ಎಂಬುದು ಕಂಚು ಇಲ್ಲವೇ ತಾಮ್ರದ ಎರಡು ಗಿಂಡಿಗಳಲ್ಲಿ ನೀರನ್ನು ತುಂಬಿಸಿ, ಅದಕ್ಕೆ ಹೂವು, ಅರಿಶಿನ-ಕುಂಕುಮಗಳಿಂದ ಸಿಂಗಾರಗೊಳಿಸಿ, ಹಿತಾರು ಪೂಜೆಗೆಂದೇ ಮನೆಯಲ್ಲಿ ನಿಗದಿ ಮಾಡಿರುವ ಜಾಗದಲ್ಲಿಟ್ಟು ಪೂಜಿಸುವುದು. ಆ ಕುಟುಂಬದಲ್ಲಿ ಬಾಳಿ-ಬದುಕಿ ತೀರಿಹೋಗಿರುವ ಎಲ್ಲಾ ಹಿರಿಯರು ಆ ಹಿತಾರಿನಲ್ಲಿ ಇರುತ್ತಾರೆ

ಎಂಬುದು ನಂಬಿಕೆ. ಮನೆಯಲ್ಲಿ ನಡೆಯುವ ಎಲ್ಲಾ ಹಬ್ಬಗಳಲ್ಲಿ, ಹಿತಾರನ್ನು ಇಟ್ಟು, ಬಾಳೆ ಎಲೆಯ ಎಡೆಯಲ್ಲಿ ಹಬ್ಬಕ್ಕೆ ಮಾಡಿದ ಬಗೆ ಬಗೆಯ ಅಡುಗೆಗಳನ್ನು ಬಡಿಸಿ, ಪೂಜೆ ಮಾಡಿದ ಬಳಿಕ ಮನೆಯವರೆಲ್ಲಾ ಊಟಮಾಡುವುದು ಪದ್ಧತಿ.

ಇದಲ್ಲದೇ ಮದುವೆ, ಮನೆಯೊಕ್ಕಲು, ಮಗುವಿಗೆ ಹೆಸರಿಡುವುದು ಇಂತಹ ಒಸಗೆಗಳಲ್ಲೂ ಕೂಡ ಹಿತಾರನ್ನು ಇಟ್ಟು ಪೂಜೆ ಮಾಡಿ ಹಿರಿಯರ ಹಾರೈಕೆ ಪಡೆದು ಕೆಲಸಗಳನ್ನು ಮುಂದುವರಿಸಲಾಗುವುದು. ಹಿತಾರಿನ ಪೂಜೆಯಲ್ಲಿಯೂ ಕೂಡ ಹಲತನವಿದೆ. ಮನೆಯಿಂದ ಮನೆಗೆ, ಊರಿನಿಂದ ಊರಿಗೆ ಈ ಪೂಜೆಯಲ್ಲಿ ಸಣ್ಣ-ಪುಟ್ಟ ಬದಲಾವಣೆಗಳಿವೆ, ಈ ಬದಲಾವಣೆಗಳು ಹಲತನವನ್ನು ಹುಟ್ಟುಹಾಕಿದೆ. ನಮ್ಮ ಮನೆಯ ಹಿತಾರಿನ ಪೂಜೆಯಲ್ಲಿ, ಹಿತಾರನ್ನಿಟ್ಟು ಮೂರು ಇಲ್ಲವೇ ಐದು ಎಲೆಗಳ ಎಡೆಯನ್ನಿಟ್ಟು, ಅಡುಗೆಯನ್ನು ಬಡಿಸಿ ಮನೆಯಲ್ಲಿರುವ ಎಲ್ಲರೂ ಬಂದು ದೂಪವನ್ನು ಹಾಕಬೇಕು. ಎಲ್ಲರೂ ದೂಪವನ್ನು ಹಾಕಿದ ಬಳಿಕ ಹಣ್ಣು-ಕಾಯಿ ಮಾಡಲಾಗುತ್ತದೆ. ಆಮೇಲೆ ಎಲ್ಲರೂ ಒಟ್ಟಿಗೆ ಬಂದು ಕೈ ಮುಗಿದು ನಿಲ್ಲಬೇಕು, ಆಗ ಮನೆಯಲ್ಲಿರುವ ದೊಡ್ಡವರೊಬ್ಬರು ಹಿತಾರಿನ ಎದುರು ಕೋರಿಕೆಗಳನ್ನು ಇಡುತ್ತಾರೆ. ನನ್ನ ಅಜ್ಜ ಮಾಡುತ್ತಿದ್ದ ಕೋರಿಕೆ ನನಗೆ ಈಗಲೂ ನೆನಪಿದೆ;

ಅಯ್ಯಾ, ನಾವ್ ಮಾಡೋ ಹಬ್ಬದಲ್ಲಿ, ಏನೋ ಹೂವು ಕೊಡೋದರಲ್ಲಿ ಹೂವಿನ ಎಸಳು ಕೊಟ್ಟು, ಕೈಲಾದ ಎಡೆ ಇಟ್ಟು, ನಿನ್ ಕಾಲಿಗ್ ಬಿದ್ದು ಕೇಳ್ ಕೊಳ್ತಾ ಇದ್ದೀವಿ. ಕುಟುಂಬಕ್ಕೆ ಯಾವುದೇ ತೊಂದರೆ ಆಗದಂಗೆ, ನಾವು ಹೋದಲ್ಲಿ, ಬಂದಲ್ಲಿ, ಕುಂತಲ್ಲಿ, ನಿಂತಲ್ಲಿ ಎಲ್ಲಾ ಕಡೆನೂ ಕಾಪಾಡಿಕೊಂಡು, ಮನೆಯನ್ನು, ಮನೆಯವರನ್ನು ಕಾಪಾಡಿಕೊಂಡು ಹೋಗಬೇಕಪ್ಪ ತಂದೆ. ನಾವು ಕೊಡೋ ಎಡೆಯಲ್ಲಿ ಏನಾದರು ತಪ್ಪಾಗಿದ್ದರೆ ಅದನ್ನ ಹೊಟ್ಟೆಗೆ ಹಾಕಿಕೊಂಡು ಕೈ ಹಿಡಿದು ನಡೆಸಿಕೊಂಡು ಹೋಗಬೇಕಪ್ಪ. ಏನೆ ತೊಂದರೆಗಳಿದ್ದರೂ ನೀನೇ ಕಾಪಾಡಿ, ಕುಟುಂಬ ಉದ್ದಾರ ಆಗೋ ಹಾಗೆ ಮಾಡೋ ನನ್ ಅಪ್ಪನೇ...

ಈ ಕೋರಿಕೆ ಮುಗಿದ ಒಂದೆರೆಡು ನಿಮಿಶ ಮನೆಯಲ್ಲಿರುವ ಎಲ್ಲರು ಮೌನವಾಗಿರಬೇಕು. ಈ ಮೌನವಾಗಿರುವ ಹೊತ್ತಿನಲ್ಲಿ ಮನೆಯ ಮುಂದಿನ ಬಾಗಿಲು ತೆಗೆದಿರಬೇಕು ಮತ್ತು ಹಿತಾರಿಗೆ ಬೆನ್ನು ಹಾಕಿ ನಿಲ್ಲಬೇಕು, ಅಂದರೆ ಹಿತಾರಿನ ಕಡೆ ಯಾರು ನೋಡಬಾರದು. ಮೌನವಾಗಿರುವಾಗ ನಮ್ಮ ತಲೆಮಾರಿನ ಹಿರಿಯರು, ಮನೆಯ ಎದುರು ಬಾಗಿಲಿನಿಂದ ಬಂದು ನಾವು ಇಟ್ಟ ಎಡೆಯಲ್ಲಿನ ಗಾಳಿಯನ್ನು ಸೇವಿಸುತ್ತಾರೆ ಎಂಬುದು ನಂಬಿಕೆ. ಎರಡು ನಿಮಿಶಗಳ ಮೌನ ಮುಗಿದ ಮೇಲೆ ಮನೆಯಲ್ಲಿರುವ ದೊಡ್ಡವರು ಎಲ್ಲರನ್ನು ಹಿತಾರಿನ ಕಡೆ ತಿರುಗಲು ಹೇಳುತ್ತಾರೆ. ಮತ್ತೊಬ್ಬರು, ಒಂದು ತಂಬಿಗೆ ನೀರನ್ನು ತೆಗೆದುಕೊಂಡು ಹೋಗಿ ಮನೆಯ ಎದುರು ಬಾಗಿಲ ಹೊರಗೆ ಚೆಲ್ಲುತ್ತಾರೆ. ನಮ್ಮ ಹಬ್ಬದೂಟಕ್ಕೆ ಬಂದಿರುವ ಹಿರಿಯರ ಕಾಲನ್ನು ತೊಳೆದು ಮನೆಯ ಒಳಗೆ ಬರಮಾಡಿಕೊಳ್ಳುತ್ತಿದ್ದೇವೆ ಎಂಬುದು ಇದರ ಹಿಂದಿರುವ ನಂಬಿಕೆ. ಇದು ಮುಗಿದ ಮೇಲೆ ನಮ್ಮ ಹಿಂದಿನ ತಲೆಮಾರಿನ ಹಿರಿಯರು ಈ ಹಬ್ಬದಲ್ಲಿ ನಮ್ಮ ಜೊತೆಯೇ ಇದ್ದಾರೆ ಎಂಬಂತಹ ನಂಬಿಕೆ ಹುಟ್ಟಿ, ಎಲ್ಲರು ಹಿತಾರಿಗೆ ಅಡ್ಡ ಬೀಳುತ್ತಾರೆ. ಹಿತಾರಿನ ಎಡೆಯನ್ನು ತೆಗೆದುಕೊಂಡು ಬಳಿಕ ಎಲ್ಲರೂ ಊಟ ಮಾಡುತ್ತಾರೆ.

ಈ ಹಿತಾರಿನ ಎಡೆಯನ್ನು ಕೂಡ ಮೊದಲು ಮನೆಯಲ್ಲಿರುವ ದೊಡ್ಡವರು ಎಂಜಲು ಮಾಡುವುದು ಪದ್ಧತಿ. ಇನ್ನು ಹಿತಾರಿಗೆ ಬಾಡೂಟ ಹಾಗು ಹಸಿರೂಟ ಎರೆಡನ್ನೂ ಇಡಲಾಗುವುದು. ಹಿತಾರು ಇಡಲೆಂದೇ ಮನೆಯಲ್ಲಿ ಒಂದು ಜಾಗವನ್ನು ನಿಗದಿ ಮಾಡಿರುತ್ತಾರೆ. ಕೆಲವೊಮ್ಮೆ ನೆಲದಿಂದ ಅರ್ಧ ಅಡಿ ಎತ್ತರಕ್ಕೆ ಕಟ್ಟೆ ಕಟ್ಟಿ ಅಲ್ಲಿ ಹಿತಾರನ್ನು ಇಡುತ್ತಾರೆ. ಇದನ್ನು 'ಇಡಕಲು'

ಎನ್ನುತ್ತಾರೆ. ಹಿತಾರಿಗೆ ಬಡಿಸುವ ಅಡುಗೆಯನ್ನು ಮೊದಲು ಯಾರು ಎಂಜಲು ಮಾಡುವ ಹಾಗಿಲ್ಲ. ಮಾಡಿರುವ ಸಾರು ಉಪ್ಪಾಗಿದೆಯೋ, ಸಪ್ಪೆಯೋ ಎಂಬುವುದನ್ನು ಕೂಡ ನೋಡುವ ಹಾಗಿಲ್ಲ. ಹಾಗೇನಾದರು ಮಾಡಿದರೆ ಅದು ನಮ್ಮ ಹಿರಿಯರನ್ನು ಹೀಗೆಳೆದಂತೆ.

ಈ ಹಿತಾರಿನಲ್ಲಿ ಮತ್ತೊಂದು ವಿಶೇಶ ಎಂದರೆ 'ಕೇಲು ಪೂಜೆ'. 'ಕೇಲುಕಂದಲು' ಎಂಬುದು ಮಣ್ಣಿನಲ್ಲಿ ಮಾಡಿರುವ ಚಿಕ್ಕ ಗಿಂಡಿಗಳು, ಈ ಗಿಂಡಿಗಳಿಗೆ ಗೋಪುರದ ಮಾದರಿಯಲ್ಲಿ ಚಿಕ್ಕ ಮುಚ್ಚುಳಗಳಿರುತ್ತವೆ, ಗಿಂಡಿಯ ಹೊರಗಡೆ ಬಣ್ಣ ಬಣ್ಣದ ಚಿತ್ತಾರಗಳಿರುತ್ತವೆ. ಹಿತಾರಿನಲ್ಲಿ ಈ ಕೇಲು ಕಂದಲನ್ನು ಪೂಜೆ ಮಾಡುವುದು ಕೆಲವು ಹಬ್ಬಗಳಲ್ಲಿ ಮಾತ್ರ. ಹಾಗೆಯೇ ಕೇಲು ಪೂಜೆಯನ್ನು ಎಲ್ಲರ ಮನೆಯಲ್ಲಿ ಮಾಡುವ ಹಾಗಿಲ್ಲ.



*ಕೇಲುಕಂದಲುಗಳು*

ಈ ಕೇಲು ಪೂಜೆಗೂ ಊರಿನ ಸುಗ್ಗಿ ಹಬ್ಬಕ್ಕೂ ನಂಟಿರುತ್ತದೆ. ಇಲ್ಲಿ ಸುಗ್ಗಿ ಹಬ್ಬ ಎಂದರೆ 'ಸಂಕ್ರಾಂತಿ'ಯಲ್ಲ. ಹಲವು ಊರುಗಳಲ್ಲಿ ಆ ಊರಿನ ದೇವರ ಹಬ್ಬವನ್ನು ವರುಶಕ್ಕೆ ಒಮ್ಮೆ ಮಾಡುತ್ತಾರೆ, ಇದು ಆ ಊರಿನ ಸುಗ್ಗಿ ಹಬ್ಬ ಆಗಿರುತ್ತದೆ. ಈ ಹಬ್ಬದ ಮುಂದಾಳ್ತನವನ್ನು ಹಲವು ಮನೆತನಗಳು ನಡೆಸಿಕೊಂಡು ಬಂದಿರುತ್ತಾರೆ, ಇಂತಹ ಮನೆತನಗಳನ್ನು 'ಕುಳಗಾರರು' ಎನ್ನುತ್ತಾರೆ. ಕುಳಗಾರರ ಮನೆತನಕ್ಕೆ ಸೇರಿದವರು ಮಾತ್ರ ಕೇಲು ಕಂದಲು ಪೂಜೆಯನ್ನು ಮಾಡಬಹುದು.

ಕುಳಗಾರರಾಗಲು ಯಾವುದೇ ಜಾತಿಯ ನಂಟಿಲ್ಲ. ಕೆಲವೊಮ್ಮೆ ಊರಿನ ಎಲ್ಲಾ ಮನೆತನಗಳು ಕುಳಗಾರರಾಗಿರುತ್ತಾರೆ. ಕೇಲು ಕಂದಲನ್ನು ಮೂಲ ಮನೆಯಲ್ಲಿ ಮಾತ್ರ ಪೂಜಿಸಲಾಗುವುದು. ಒಂದು ವೇಳೆ ಮನೆಯವರು ಪಾಲಾಗಿ ಬೇರೆ ಬೇರೆಯಾದರೆ, ಪಾಲಾಗಿ ಬೇರೆ ಮನೆ ಮಾಡಿಕೊಂಡವರು ಅವರ ಮನೆಯಲ್ಲಿ ಕೇಲುಕಂದಲು ಪೂಜಿಸುವ ಹಾಗಿಲ್ಲ. ಈ ಕೇಲುಕಂದಲನ್ನು ಪೂಜಿಸುವ ಹಕ್ಕಿಗೋಸ್ಕರವಾಗಿ ಮನೆಯಲ್ಲಿ ಒಂದಾಗಿರಲು ಹಲವರು ಬಯಸುವುದನ್ನು ನಾನು ಕೇಳಿದ್ದೇನೆ.

ಮನೆಯಲ್ಲಿ ಯಾರಾದರು ತೀರಿಹೋದರೆ, ತೀರಿಹೋದ ಹನ್ನೆರೆಡು ದಿನಗಳ ಬಳಿಕ ತೀರಿಹೋದವರನ್ನು ಹಿತಾರಿಗೆ ಸೇರಿಸುವ ಕೆಲಸವನ್ನು ಮಾಡಲಾಗುತ್ತದೆ. ಇದಕ್ಕಾಗಿ, ದಾಸಯ್ಯನವರನ್ನು ಇಲ್ಲವೇ ಜೋಗಪ್ಪನವರನ್ನು ಕರೆಸುತ್ತಾರೆ. ತಿಮ್ಮಪ್ಪ ದೇವರ ಒಕ್ಕಲಿನ ಮನೆತನದವರು ದಾಸಯ್ಯನವರನ್ನು, ಜೋಗಪ್ಪ ದೇವರ ಒಕ್ಕಲಿನ ಮನೆತನದವರು ಜೋಗಪ್ಪನವರನ್ನು ಕರೆಸುತ್ತಾರೆ. ಇವರುಗಳು ಹಿತಾರನ್ನು ಇಟ್ಟು, ತೀರಿಹೋದವರ ಚಿತ್ರವನ್ನು ಇಟ್ಟು, ಶಂಕ - ಜಾಗಟೆಗಳನ್ನು ಬಾರಿಸಿ, ಬಗೆ ಬಗೆಯ ಪೂಜೆಗಳನ್ನು ಮಾಡಿ ತೀರಿಹೋದವರನ್ನು ಹಿತಾರಿಗೆ ಸೇರಿಸುತ್ತಾರೆ. ಇದನ್ನು 'ಇಂಡುಗೂಡಿಸುವುದು' ಎನ್ನುವರು. ಹೀಗೆ ಹಿತಾರು ಎಂಬುದು ನಮ್ಮ ಕುಟುಂಬದಲ್ಲಿ ಇದ್ದ ಎಲ್ಲಾ ಹಿರಿಯರುಗಳ ಸಂಕೇತವಾಗಿರುತ್ತದೆ. ಇದು ಹಲವು ತಲೆಮಾರುಗಳಿಂದ ನಡೆದುಕೊಂಡು ಬಂದಿದೆ.



*ಕೆಲಸಕ್ಕೆಂದು ಪಟ್ಟಣದಲ್ಲಿದ್ದರೂ ಹಬ್ಬದಂದು ನಡೆಸುವ ಹಿತಾರು ಪೂಜೆ*

ಮಾರ್ಲಾಮಿ ಹಬ್ಬ (ಮಲೆನಾಡಿನ ಕೆಲವು ಬಾಗದಲ್ಲಿ ಮಾಳದ ಅಮಾಸೆ ಎಂದು ಕೂಡ ಕರೆಯುವರು) ಎಂದರೆ ಹಿತಾರಿನ ಪೂಜೆ ಬಲುಜೋರು. ಈ ಹಬ್ಬದಲ್ಲಿ ಕುಟುಂಬದ ಎಲ್ಲರೂ ಸೇರಿ ಕೇಲುಕಂದಲಿಗೆ ದೂಪ ಹಾಕಬೇಕು. ಮನೆಯಿಂದ ಪಾಲಾಗಿ ಹೊರಗೆ ಹೋದವರು ಕೂಡ ಆ ಹಬ್ಬದಲ್ಲಿ ಬಂದು ಹಿರಿಯರಿಗೆ ದೂಪ ಹಾಕಲೇಬೇಕು. ಇಲ್ಲವಾದರೆ ಹಿರಿಯರಿಗೆ ದೂಪ ಹಾಕಿಲ್ಲ ಎಂಬ ನೋವು ಅವರನ್ನೇ ಕಾಡುತ್ತಿರುತ್ತದೆ.

ಮಾರ್ಲಾಮಿ ಹಬ್ಬವು, ಹಿರಿಯರೇ ನಮ್ಮ ದೇವರು ಎಂದು ಪೂಜಿಸುವ ನಮ್ಮ ಬುಡಕಟ್ಟು ನಡೆ ನುಡಿಯ ಕುರುಹು. ಅದೇ ಬಗೆಯಲ್ಲಿ ಈ ಹಿತಾರು ಕೂಡ ಒಂದು ಕುರುಹು. ನಮ್ಮ ಹುಟ್ಟಿಗೆ ನಮ್ಮ ಹಿರಿಯರೇ ಕಾರಣ, ಹಿರಿಯರ ಒಳ್ಳೆಯ ಕೆಲಸಗಳೇ ನಮ್ಮನ್ನು ಇಂದಿಗೂ ಕಾಯುತ್ತಿರುವುದು. ತೀರಿಹೋದ ಹಿರಿಯರೆಲ್ಲಾ ದೇವರಾಗಿ ಹಿತಾರಿನಲ್ಲಿದ್ದಾರೆ, ಅದನ್ನು ನಮ್ಮ ಎಲ್ಲಾ ನಲಿವಿನ ಹೊತ್ತಿನಲ್ಲಿ ನೆನೆದು ಅವರಿಂದ ಹಾರೈಕೆಗಳನ್ನು ಬೇಡುತ್ತಿದ್ದೇವೆ. ಹಿತಾರನ್ನು ಇಟ್ಟ ಮೂರು ದಿನಗಳ ಬಳಿಕ ದೂಪ ಹಾಕಿ, ಹಿತಾರಿನ ಗಿಂಡಿಯ ನೀರನ್ನು ಮರದ ಬುಡಕ್ಕೆ ಬಿಟ್ಟು ಹಿರಿಯರನ್ನು ಬೀಳ್ಕೊಡಲಾಗುತ್ತದೆ. ಮತ್ತೆ ಮುಂದಿನ ಹಬ್ಬಕ್ಕೆಂದು ಆ ಗಿಂಡಿ/ಕೇಲುಕಂದಲನ್ನು ತೆಗೆದಿಡಲಾಗುತ್ತದೆ.

***(ಚಿತ್ರ ಸೆಲೆ: ರತೀಶ ರತ್ನಾಕರ)***

# ಕರಗ : ನಮ್ಮ ಬೆಂಗಳೂರ ದೊಡ್ಡ ಹಬ್ಬ

– ಅನ್ನದಾನೇಶ ಶಿ. ಸಂಕದಾಳ.



ಬೆಂಗಳೂರು" ಅಂದ ಕೂಡಲೇ 'ಅದು ಅಯ್ ಟಿ, ಬಿ ಟಿ' ಗಳ ನಗರ ಎಂದು ಜಗತ್ತಿನೆಲ್ಲೆಡೆ ಮಾತಾಡಿಕೊಳ್ಳುವಂತೆ ಈ ನಗರ ಹೆಸರು ಮಾಡಿದೆ. ಮಾಹಿತಿ ತಂತ್ರಜ್ಞಾನದ ಚಟುವಟಿಕೆಗಳ ಬೀಡಾಗಿರುವ ಈ ಊರಲ್ಲಿ ಇಂದು ದೊಡ್ಡ ದೊಡ್ಡ ಶಾಪಿಂಗ್ ಮಾಲುಗಳನ್ನು, ಮಲ್ಟಿಪ್ಲೆಕ್ಸ್ ಗಳನ್ನು,ಮೆಟ್ರೋ ರಯ್ಲು-ಅಯ್ಯಾರಾಮಿ ವೋಲ್ವೋ ಬಸ್ಸುಗಳನ್ನು ಕಾಣಬಹುದಾಗಿದೆ. ಇದು ಬದಲಾಗುತ್ತಿರುವ ಕಾಲದ ಜೊತೆ ಜೊತೆಗೆ ಬೆಂಗಳೂರು ಹೇಗೆ ಹೆಜ್ಜೆ ಹಾಕುತ್ತಿದೆ ಎಂದು ತೋರಿಸುತ್ತದೆ.

ನಗರವು ದೊಡ್ಡದಾಗಿ ಬೆಳೆಯುತ್ತಾ ಹೊಸತನಕ್ಕೆ ತಕ್ಕಂತೆ ಬದಲಾಗುತ್ತಿದ್ದರೂ, ತನ್ನ ಗುರುತಾದ ಸಾಂಪ್ರದಾಯಿಕ ಆಚರಣೆಗಳನ್ನು ಬಿಟ್ಟು ಕೊಡದಿರುವುದು ಈ ನಗರದ ಹೆಗ್ಗಳಿಕೆ. ನಗರದಲ್ಲಿ ನಡೆಯುವ ಬೆಂಗಳೂರು ಕರಗ, ಕಡಲೇಕಾಯಿ ಪರಿಶೆ, ದೊಡ್ಡಮ್ಮ - ಅಣ್ಣಮ್ಮ ದೇವಿ ಉತ್ಸವಗಳು ನಗರವನ್ನು "ನಮ್ಮ ಬೆಂಗಳೂರು" ಆಗಿಯೇ ಹಿಡಿದಿಟ್ಟಿವೆ. ಈ ಉತ್ಸವಗಳು ಕೇವಲ ನಿನ್ನೆ ಮೊನ್ನೆಯವಲ್ಲ, ಆ ಆಚರಣೆಗಳಿಗೆ ಅವುಗಳದೇ ಆದ ಹಿನ್ನೆಲೆ ಇದೆ. ಮೊನ್ನೆ ಮೊನ್ನೆಯಶ್ಟೆ (ಏಪ್ರಿಲ್ ಏಳರಿಂದ ಏಪ್ರಿಲ್ ಹದಿನೇಳು) ಬೆಂಗಳೂರು ಕರಗ ನಡೆಯಿತು. ಲೋಕಸಬೆ ಚುನಾವಣೆ ಬರಾಟೆಯಲ್ಲಿ ಈ ಬಾರಿ ಕರಗ ಹೆಚ್ಚು ಸದ್ದು ಮಾಡದಿದ್ದರೂ, ಉತ್ಸವ ಚೆನ್ನಾಗಿಯೇ ನೆರವೇರಿತು.

**ಏನಿದು ಕರಗ? ಏನದರ ಹಿನ್ನೆಲೆ?**

ಕರಗ ಅಂದರೆ 'ಕಯ್ಯಲ್ಲಿ ಮುಟ್ಟದೆ(ಕ) ರುಂಡದಲ್ಲಿ(ರ) ಮುಡಿದು ಗತಿಸುವುದು(ಗ)' ಎಂದು ಹೇಳಲಾಗುತ್ತದೆ.ಮಡಿಕೆಯ ಮೇಲೆ ಹೂವಿನ ಮೇರುವೆ(ಪಿರಮಿಡ್) ಇಟ್ಟು ಅದನ್ನೇ ತಲೆಯ ಮೇಲೆ ದರಿಸಲಾಗುವುದು. "ತಿಗಳ" ಸಮುದಾಯದ ಜನರು ಆಚರಿಸುವ ಈ ಹಬ್ಬದ ಆಚರಣೆಗೆ 500 ವರುಶಗಳ ಇತಿಹಾಸವಿದೆ. ಈ ಹಬ್ಬಕ್ಕೆ ಕಾರಣವನ್ನು ಹುಡುಕುತ್ತಾ ಹೋದರೆ, ಅದು ಮಹಾಬಾರತಕ್ಕೆ ಕೊಂಡೊಯ್ಯುತ್ತದೆ. ಮಹಾಬಾರತದ ದ್ರವ್ಪದಿ ಆದಿಶಕ್ತಿಯ ಒಂದು ರೂಪವೆಂದು ಹೇಳಲಾಗುತ್ತದೆ.

ಕುರುಕ್ಶೇತ್ರ ಕಾಳಗ ಮುಗಿದು ಪಾಂಡವರೆಲ್ಲರೂ ಕಯ್ಲಾಸಕ್ಕೆ ಮರಳುತ್ತಿರುತ್ತಾರೆ. ಪಾಂಡವರು ಮುಂದೆ ಹೋಗುತ್ತಾ ದ್ರವ್ಪದಿ ಅವರನ್ನು ಹಿಂಬಾಲಿಸಿಕೊಂಡು ಒಬ್ಬಳೇ ಬರುತ್ತಿರುತ್ತಾಳೆ. ಪಾಂಡವರು ಮತ್ತು ದ್ರವ್ಪದಿ ನಡುವೆ ದೂರ ಹೆಚ್ಚಾಗುತ್ತಿದ್ದಾಗ, ತಿಮರಾಸುರನೆಂಬ ರಕ್ಕಸನೊಬ್ಬ ಒಬ್ಬಂಟಿಯಾಗಿದ್ದ ದ್ರವ್ಪದಿಗೆ ಕಾಟ ಕೊಡಲು ಶುರು ಮಾಡುತ್ತಾನೆ. ಆಗ ದ್ರವ್ಪದಿಯು ಆದಿಶಕ್ತಿಯ ರೂಪವನ್ನು ತೋರುತ್ತಾ ತಿಮರಾಸುರನನ್ನು ಸದೆ ಬಡಿಯಲು, ತನ್ನ ತಲೆಯಿಂದ 'ಯಜಮಾನ'ರನ್ನು, ಹಣೆಯಿಂದ 'ಗಣಾಚಾರಿ'ಗಳನ್ನು, ಕಿವಿಗಳಿಂದ 'ಗವ್ಡ'ರನ್ನು, ಬಾಯಿಯಿಂದ 'ಗಂಟೆಪೂಜಾರಿ'ಗಳನ್ನು ಮತ್ತು ಹೆಗಲಿನಿಂದ 'ವೀರಕುಮಾರ'ರನ್ನು ಸ್ರುಶ್ಟಿ ಮಾಡುತ್ತಾಳೆ. ಹೀಗೆ ಹುಟ್ಟಿದ ಇವರೆಲ್ಲರೂ ಸೇರಿ ಆ ರಕ್ಕಸನ ಎದಿರು ಹೋರಾಡಿ ಗೆಲ್ಲುತ್ತಾರೆ.


ಹೀಗೆ ಮಕ್ಕಳನ್ನು ಹುಟ್ಟಿಸಿದ ದ್ರವ್ಪದಿ ತಾಯಿ ಆದಿಶಕ್ತಿಯಾಗಿ, ಮತ್ತೆ ಬೂಮಿಗೆ ಮರಳಿ ಬಾರದಂತೆ ಕಯ್ಲಾಸಕ್ಕೆ ಹೋಗುವುದು ಮಕ್ಕಳಿಗೆ ದುಗುಡ ಉಂಟು ಮಾಡುತ್ತದೆ. ಅವಳು ಹೋಗದಂತೆ ಬೇಡಿಕೊಳ್ಳಲು ಕ್ರಿಶ್ಣನು ಅವರಿಗೆ ಹೇಳುವನು. ತಾಯಿಯನ್ನು ಹೋಗದಂತೆ ತಡೆಯಲು ತಮ್ಮ ಕಯ್ಯಲ್ಲಿರುವ ಕತ್ತಿಯಿಂದ ತಮ್ಮ ಎದೆಗೆ ತಿವಿದುಕೊಳ್ಳುತ್ತಾ (ಇದನ್ನು ಕರಗ ಹಬ್ಬದಲ್ಲಿ 'ಅಲಗುಸೇವೆ' ಎನ್ನುತ್ತಾರೆ) "ನಮಗೆ ನೀನಲ್ಲದೆ ಇನ್ಯಾರು ದಿಕ್ಕು, ಹೋಗದಿರು" ಎಂದು ಅಲವತ್ತು ಕೊಳ್ಳುತ್ತಾರೆ. ಇದನ್ನು ನೋಡಿ ದ್ರವ್ಪದಿಗೆ ಮರುಕವಾಗಿ ಪ್ರತೀ ವರುಶವೂ ಮೂರು ದಿನ ಬೂಮಿಗೆ ಬಂದು ಮಕ್ಕಳೊಂದಿಗೆ ಇರುವ ಮಾತು ನೀಡುತ್ತಾಳೆ. ಆ ಮೂರು ದಿನಗಳೇ ಕರಗ ಹಬ್ಬದ ದಿನಗಳು. "ಅಂದು ದ್ರವ್ಪದಿಯಿಂದ ಹುಟ್ಟಿದ ವೀರಕುಮಾರರೇ ನಾವು" ಎಂದು ತಿಗಳ ಸಮುದಾಯದವರ ನಂಬಿಕೆ.

**ಕರಗ ನಡೆಯುವ ಬಗೆ:**

ಕರಗ ಹಬ್ಬದ ಆಚರಣೆ ಹಿಂದೂ ತೂಗುತೇದಿಯ(ಕ್ಯಾಲೆಂಡರ್) ಮೊದಲ ತಿಂಗಳ ಸಪ್ತಮಿ ಇಂದ ಶುರುವಾಗಿ ಹನ್ನೊಂದು ದಿನಗಳ ಕಾಲ ನಡೆಯುತ್ತದೆ. ಆ 11 ದಿನಗಳ ಗಡುವಿನಲ್ಲಿ, 3 ದಿನಗಳ ಕಾಲ ತಾಯಿ ದ್ರವ್ಪದಿ ತಮ್ಮೊಡನೆ ಇರುತ್ತಾಳೆಂದು ತಿಗಳರ ನಂಬಿಕೆ. ಬೆಂಗಳೂರಿನ ತಿಗಳರ ಪೇಟೆಯಲ್ಲಿರುವ ದರಮರಾಯ ಸ್ವಾಮಿ ಗುಡಿಯಲ್ಲಿ ಹಬ್ಬದ ಚಟುವಟಿಕೆಗಳು ನಡೆಯುತ್ತವೆ. ಹನ್ನೊಂದು ದಿನಗಳ ಸಡಗರದಲ್ಲಿ ಕಾರ್ಯಕ್ರಮಗಳು ಹೀಗಿರುತ್ತವೆ:

**ಬಾವುಟ ಏರಿಸುವುದು:** ಉತ್ಸವದ ಮೊದಲ ದಿನವಾದ ಅಂದು ಹಳದಿ ಬಣ್ಣದ ಬಾವುಟವೊಂದನ್ನು ಗುಡಿಯ ಅಂಗಳದೊಳಗೆ, ಬಿದಿರಿನ ಕಂಬದ ಮೇಲೆ ಹಾರಿಸಲಾಗುತ್ತದೆ. ಅದರಿಂದ ಕರಗ ಉತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ಗಣಾಚಾರಿಗಳು, ಗಂಟೆಪೂಜಾರಿಗಳು, ವೀರಕುಮಾರರು ಮತ್ತು ಕರಗವನ್ನು ಹೊರುವವರು, ಉತ್ಸವಕ್ಕೆ ಯಾವ ತಡೆಯೂ ಇಲ್ಲದೆ ನಡೆಸಲು ಪಣ ತೊಟ್ಟು ದಾರವೊಂದನ್ನು(ಕಂಕಣ) ತಮ್ಮ ಕಯ್ಯಿಗೆ ಕಟ್ಟಿಕೊಂಡು, ಒಂದು ದಾರವನ್ನು ಬಾವುಟಗಮ್ಬಕ್ಕೂ ಕಟ್ಟುವರು.

**ಶುದ್ದಿ ಕಾರ್ಯ:** ಬಾವುಟ ಹಾರಿಸಿದ ಮರುದಿನದಿಂದ ಈ ಕೆಲಸ ಶುರುವಾಗುತ್ತದೆ. ಆದಿಶಕ್ತಿಯು ಬೂಮಿಗೆ ಬರುತ್ತಿರುವುದರಿಂದ ಕೆಟ್ಟ ಶಕ್ತಿಗಳು ಸುಳಿಯಬಾರದೆಂದು ಪೂಜೆಗಳನ್ನು ನಗರದ ಆರು ಕಡೆಗಳಲ್ಲಿ ಎಂಟು ದಿನ ಮಾಡಲಾಗುತ್ತದೆ. ಪ್ರತಿ ದಿನದ ಪುಣ್ಯ ಜಳಕದ ಬಳಿಕ, ಕೆಟ್ಟ ಶಕ್ತಿಗಳನ್ನು ದೂರವಿಡುವಂತೆ ಕರಗದ ಪೂಜಾರಿಯು ದೇವಿಯನ್ನು ಕೋರುವುದು ಪದ್ದತಿ.



**ಆರತಿ ಉತ್ಸವ:** ಇದು ಕರಗ ಹಬ್ಬದ ಆರನೇ ದಿನದಂದು ನಡೆಯುತ್ತದೆ. ಮೊದಲ ದಿನದಿಂದ ಆರನೇ ದಿನದವರೆಗೂ ಪೂಜೆಗಳು ನಡೆಯುತ್ತಿರುತ್ತವೆ. ತಿಗಳ ಸಮುದಾಯದ ಹೆಂಗಸರು ಅಂದು ಅವರ ದೇವತೆಯಾದ ದ್ರವ್ಪದಿಗೆ ಆರತಿ ಸೇವೆಯನ್ನು ಮಾಡುವರು. ಯಲಕುಂಗ ಹೂವಿನಿಂದ ಅಂದಗೊಂಡ ಅಕ್ಕಿ ಮತ್ತು ಬೆಲ್ಲ ಇರುವ ಪಾತ್ರೆಗಳಿಗೆ, ಮಲ್ಲಿಗೆ ಮತ್ತು ಕನಕಾಂಬರ ಹೂವುಗಳಿಂದ ಸುತ್ತುವರಿದ ಕೋಲನ್ನು ಸಿಕ್ಕಿಸಲಾಗಿರುತ್ತದೆ. ಪಾತ್ರೆಯ ಒಳಗೆ ದೀವಿಗೆಯನ್ನು ಇಡಲಾಗಿರುತ್ತದೆ. ಈ ಆರತಿಯನ್ನು ಹೆಂಗಸರು ತಲೆ ಮೇಲೆ ಹೊತ್ತು ಗುಡಿಯವರೆಗೂ ಬಂದು ಆಮೇಲೆ ಪೂಜೆ ಮಾಡುತ್ತಾರೆ. ಆಮೇಲೆ ಗರಡಿಮನೆಯಲ್ಲಿ ಕಸರತ್ತು ಮಾಡಿರುವ ಹುಡುಗರು ಕಾಳಗ ಕಲೆಗಳಾದ ಕತ್ತಿ ವರಸೆ, ಕೋಲು ವರಸೆ, ಕೊಂಬು ವರಸೆ ಮುಂತಾದ ಚಳಕಗಳನ್ನು ತೋರಿಸುವರು. ಹಾಗೆಯೇ ಅಂದು 'ಪೋತರಾಜ'ನ (ಪೋತರಾಜನ ಬಗ್ಗೆ ಮುಂದೆ ತಿಳಿಯುತ್ತದೆ) ಮೂರುತಿ ಮತ್ತು ತ್ರಿಶೂಲವನ್ನು ಮೆರವಣಿಗೆಯಲ್ಲಿ ಒಯ್ಯಲಾಗುತ್ತದೆ. ಮೆರವಣಿಗೆ ಮುಗಿದ ಮೇಲೆ ಗುಡಿಯಲ್ಲಿ ಮಹಾ ಮಂಗಳಾರತಿ ಮಾಡುವರು.

**ಹಸಿ ಕರಗ:** ಹಬ್ಬದ ಏಳನೇ ದಿನ 'ಹಸಿ ಕರಗ' ಮಾಡಲಾಗುತ್ತದೆ. ಅಂದು ಶಕ್ತಿಪೀಟ ಇದೆ ಎಂದು ಹೇಳಲಾಗುವ ಸಂಪಂಗಿಕೆರೆಯ ಸುತ್ತಮುತ್ತಲಿನ ಜಾಗವನ್ನು ಚೊಕ್ಕ ಮಾಡಿ ಹೂವುಗಳಿಂದ ಅಂದಗೊಳಿಸುತ್ತಾರೆ. ವೀರಕುಮಾರರು, ಗಣಾಚಾರಿಗಳು, ಗಂಟೆಪೂಜಾರಿಗಳು, ಕುಲಪುರೋಹಿತರು ಶಕ್ತಿಪೀಟಕ್ಕೆ ಪೂಜೆ ಮಾಡುತ್ತಾರೆ. ಆಮೇಲೆ ಕರಗವನ್ನು ಹೊರುವುವವರಿಗೆ ಜಳಕವನ್ನು ಮಾಡಿಸುವರು. ಕೆಂಪು ಬಟ್ಟೆಯನ್ನು ಹೊದಿಸಿ, ಒಡವೆ ಮತ್ತು ಹೂವುಗಳಿಂದ ಸಿಂಗರಿಸಿ ಹಸಿ ಕರಗವನ್ನು ಮಾಡಿ ಅದನ್ನು ಪೀಟದ ಮೇಲೆ ಇಡಲಾಗುತ್ತದೆ. ಅದರ ಮಗ್ಗುಲಲ್ಲಿ ಮಾಟದಕೋಲು ಮತ್ತು ಬಾಕು(ಕತ್ತಿ) ಒಂದನ್ನೂ ಇಡಲಾಗುತ್ತದೆ.

ಕರಗವನ್ನು ಹೊತ್ತು ಕೊಳ್ಳುವವರು ಇವೆಲ್ಲವುದಕ್ಕೂ ಪೂಜೆ ಮಾಡುವರು. ಆಗ ವೀರಕುಮಾರರು ಕರ್ಪೂರವನ್ನು ಹಚ್ಚುವರು ಮತ್ತು ಸುತ್ತ ಮುತ್ತ ನೆರೆದ ಬಕ್ತರು 'ಗೋವಿಂದ'ನ ಹೆಸರು ಹೇಳಲು ಶುರು ಮಾಡುವರು. ಆಗ ವೀರಕುಮಾರರು 'ಗೋವಿಂದ ದಿಕ್ ದೀ ದಿಕ್ ದೀ' ಎಂದು ಹೇಳುತ್ತಾ ತಾವು ಹಿಡಿದಿರುವ ಕತ್ತಿಯಿಂದ ತಮ್ಮ ಎದೆಗೆ ತಿವಿದು ಕೊಳ್ಳಲು ಶುರು ಮಾಡುತ್ತಾರೆ ( ಅಲಗುಸೇವೆ ). ಈ ಹೊತ್ತಿನಲ್ಲಿ ಒಂದು ರೀತಿಯ ದಯ್ವೀ ಶಕ್ತಿ ಕರಗವನ್ನು ಹೊತ್ತುಕೊಳ್ಳುವವರ ಮೇಲೆ ಅವರಿಸೊಕೊಂಡನ್ತಾಗಿ, ಅವರು ಎಡಗಯಲ್ಲಿ ಪೀಟದ ಮೇಲಿರುವ ಮಾಟದಕೋಲಿನ ಜೊತೆ ಹಸಿಕರಗವನ್ನೂ ಮತ್ತು ಬಲಗಯಲ್ಲಿ ಬಾಕನ್ನು ಎತ್ತುಕೊಳ್ಳುವವರು. ಇದೆಲ್ಲಾ ನೋಡಲು ಬೆರಗುಗೊಳಿಸುವಂತ ಆಗುಹಗಳು ಎಂದು ಹೇಳಲಾಗುತ್ತದೆ.

ಅಲ್ಲಿಂದ ಅವರು ಹಸಿಕರಗವನ್ನು ಹಿಡಿದುಕೊಂಡು 'ಶಕ್ತಿಸ್ತಳ' ಎಂದು ಹೇಳಲಾಗುವ (ಬೆಂಗಳೂರು ಮಹಾನಗರ ಪಾಲಿಕೆ ಬಳಿ ಇರುವ) ಏಳು ಸುತ್ತಿನ ಕೋಟೆಯೆಡೆಗೆ ನಡೆಯುತ್ತಾರೆ ಮತ್ತು ವೀರಕುಮಾರರು 'ದಿಕ್ ದೀ' ದಿಕ ದೀ' ಎಂದು ಅಲಗುಸೇವೆ ಮಾಡುತ್ತಾ ಅವರನ್ನು ಹಿಂಬಾಲಿಸುತ್ತಾರೆ. ಕೋಟೆ ತಲುಪಿದ ಮೇಲೆ ಮತ್ತೊಮ್ಮೆ ಹಸಿಕರಗಕ್ಕೆ ಪೂಜೆ ಸಲ್ಲಿಸಲಾಗುತ್ತದೆ. ಅಲ್ಲಿಂದ ದರಮರಾಯ ಸ್ವಾಮೀ ಗುಡಿಯ ಕಡೆಗೆ ಮೆರವಣಿಗೆ ಸಾಗುತ್ತದೆ. ಗುಡಿಯು ಸ್ವಲ್ಪ ದೂರವಿರುವಾಗ ಹಸಿ ಕರಗ ಹೊತ್ತಿರುವವರು ಮಂಡಿಯೂರಿ ಕುಳಿತುಕೊಳ್ಳುವವರು ಆಗ ವೀರಕುಮಾರರು ಮತ್ತೊಮ್ಮೆ ಅಲಗುಸೇವೆ ನೀಡಿ 'ಶಕ್ತಿ'ಯನ್ನು ಗುಡಿಗೆ ಕರೆದು ಕೊಂಡು ಬರುತ್ತಾರೆ. ಆಗ ಗಂಟೆಪೂಜಾರಿಗಳು ಕೊರವಂಜಿ ಹಾಡನ್ನು ಹಾಡುವರು ಮತ್ತು ಕರಗವನ್ನು ಹೊತ್ತಿರುವವರು ಅದಕ್ಕೆ ತಕ್ಕಂತೆ ಕುಣಿಯುವವರು. ಗುಡಿ ತಲುಪಿದ ಮೇಲೆ ಪೂಜೆ ಸಲ್ಲಿಸಿ ಹಸಿ ಕರಗವನ್ನು ಇಳಿಸಲಾಗುವುದು.



**ಪೊಂಗಲು ಸೇವೆ:** ಇದು ಹಬ್ಬದ ಎಂಟನೆ ದಿನ ನಡೆಯುತ್ತದೆ. ಅಂದು ಹೆಣ್ಣುಮಕ್ಕಳು ಅಕ್ಕಿ ಮತ್ತು ಬೆಲ್ಲವನ್ನು ಗುಡಿಗೆ ಒಯ್ದು ಗುಡಿಯ ಅಂಗಳದಲ್ಲಿ ಪೊಂಗಲನ್ನು ಮಾಡಿ ದೇವಿಗೆ ಎಡೆ ಮಾಡುವರು. ತಮ್ಮ ಸೇವೆಯಿಂದ ತಾಯಿಯು ಸಂತಸಗೊಂಡು ಆಕೆಯು ನಮ್ಮನ್ನು ಹರಸುವಳು ಎಂಬ ನಂಬಿಕೆ ಜನರದ್ದು. ಅಂದಿಡೀ ದಿನ ಅಲ್ಲೇ ಇರುವರು. ಇರುಳಲ್ಲಿ ಗಂಟೆ ಪೂಜಾರಿಗಳು ದ್ರವ್ಪದಿ ಬಗ್ಗೆ ಪುರಾಣ ಕತೆಗಳನ್ನು ಹೇಳುವುದು ಮತ್ತು ಬಕ್ತರು ಅದನ್ನು ಕೇಳುವುದು ವಾಡಿಕೆ.

**ಹೂವಿನ ಕರಗ (ಕರಗ ಶಕ್ತ್ಯೋತ್ಸವ):** ಹಬ್ಬದ ಒಂಬತ್ತನೇ ನಡೆಯುವುದು ಹೂವಿನ ಕರಗ. (ಇದರ ಬಗ್ಗೆ ಇನ್ನೊಂದು ಬರಹದಲ್ಲಿ ನೋಡೋಣ.)

**ಗಾವು ಸೇವೆ:** ಹಬ್ಬದ ಹತ್ತನೇ ಜರಗುವ ಇದು ಪೋತರಾಜನ ಕುರಿತು ಮಾಡುವ ಸೇವೆಯಾಗಿದೆ. ಪೋತರಾಜನ ಬಗ್ಗೆ ಒಂದು ಕತೆಯಿದೆ. ಪೋತರಾಜನು ಬಹಳ ಶೂರನಾಗಿದ್ದವನು ಮತ್ತು "ಏಳು ಸುತ್ತಿನ ಕೋಟೆ" ಎಂಬ ಅರಸುನಾಡನ್ನು ಆಳುತ್ತಿದ್ದನು(ಸಾಮ್ರಾಜ್ಯ). ಆತ ಶಿವನ ಮೊರೆಗ(ಬಕ್ತ)ನಾಗಿದ್ದು, ಬಾಡನ್ನು ತಿನ್ನದವನಾಗಿರುತ್ತಾನೆ. ಇನ್ನೂ ಹೆಚ್ಚು

ಶಕ್ತಿಯನ್ನು ಪಡೆಯಲು ನೂರಾವೊಂದು ರಾಜರನ್ನು ಬಲಿ ಕೊಟ್ಟು ಶಿವನನ್ನು ಒಲಿಸಿಕೊಳ್ಳಲು ಪೂಜೆಯೊಂದನ್ನು ಮಾಡಬಯಸಿರುತ್ತಾನೆ. ನೂರು ರಾಜರನ್ನು ಸೆರೆ ಹಿಡಿದಾದಮೇಲೆ ಅವನ ಕೋಟೆಯ ಹತ್ತಿರ ನಿದ್ದೆ ಮಾಡುತ್ತಿದ್ದ ಬೀಮನನ್ನು ನೂರಾ ಒಂದನೇ ರಾಜನಾಗಿ ಸೆರೆ ಹಿಡಿಯುತ್ತಾನೆ.

ಪಾಂಡವರು ಬೀಮನ ಇಲ್ಲದಿರುವಿಕೆ ಬಗ್ಗೆ ಕ್ರಿಶ್ಣನನ್ನು ಕೇಳುತ್ತಾರೆ. ಕ್ರಿಶ್ಣನಿಗೆ ಎಲ್ಲವೂ ಗೊತ್ತಾಗಿ ಬೀಮನನ್ನು ಉಳಿಸಲು ಅರ್ಜುನನನ್ನು ಚೆಂದದ ಬಳೆ ಮಾರುವ ಕೊರವಂಜಿ ಹೆಣ್ಣಾಗಿ ಮಾಡಿ ಪೋತರಾಜನ ಕೋಟೆಯ ಹತ್ತಿರ ಕಳಿಸುವನು. ಆಕೆಯನ್ನು ನೋಡಿ ಆಕೆಯ ಚಂದಕ್ಕೆ ಮನಸೋತ ಪೋತರಾಜನು ಆಕೆಯನ್ನು ಮದುವೆಯಾಗಲು ಬಯಸುವನು. ಆಗ ಎಲ್ಲವೂ ತಿಳಿದ ಕ್ರಿಶ್ಣನು ಎರಡು ಬೇಡಿಕೆ ಮುಂದಿಡುತ್ತಾನೆ. ಸೆರೆಹಿಡಿದಿರುವ ಅರಸರನ್ನು ಬಿಡುಗಡೆಗೊಳಿಸುವುದು ಒಂದನೆಯದಾದರೆ, ಕೊರವಂಜಿಗಳು ಹಸಿಬಾಡು(ಹಸಿಮಾಂಸ) ತಿನ್ನುವುದರಿಂದ ಪೋತರಾಜನೂ ತಿನ್ನಬೇಕೆಮ್ಬುವುದು ಎರಡೆಯನೆದು. ಕಡೆಗೆ ಪೋತರಾಜನು ಎರಡೂ ಬೇಡಿಕೆಗೆ ಒಪ್ಪುವನು. ಮೊದಲಿಗೆ ಪೋತರಾಜನಿಗೆ ಕರಿಮೇಕೆಯೊಂದನ್ನು ಕೊಟ್ಟು ಹಸಿಯಾಗಿಯೇ ತಿನ್ನಲು ಹೇಳುವರು. ಪೋತರಾಜನು ಬೀಮನ ಜೊತೆ ನೆತ್ತರು ಸಮೇತ ಹಸಿ ಬಾಡನ್ನು ತಿನ್ನುವನು ಆಗ ಪಾಂಡವರು ತಮ್ಮ ತಂಗಿ ಶಂಕೊದರಿಯನ್ನು ಪೋತರಾಜನಿಗೆ ಕೊಟ್ಟು ಮದುವೆ ಮಾಡುತ್ತಾರೆ ಎಂದು ಆ ಒಂದು ಕತೆ ಹೇಳುತ್ತದೆ.

ಹಬ್ಬದ ಹತ್ತನೇ ದಿನದಂದು ಪೋತರಾಜ, ಅರ್ಜುನ ಮತ್ತು ದ್ರವ್ಪದಿ ತೇರಿನ ಮೆರವಣಿಗೆಯನ್ನು ಶಕ್ತಿಸ್ತಳಕ್ಕೆ ಕರೆದೊಯ್ಯಲಾಗುತ್ತದೆ. ಅಲ್ಲಿ ಶಾಂತಿಪೂಜೆಯನು ಮಾಡಿ ಪೋತರಾಜನ ಬಗ್ಗೆ ಪುರಾಣಕತೆಗಳನ್ನು ಹೇಳಲಾಗುತ್ತದೆ. ಆಮೇಲೆ ಉತ್ಸವ ಗುಡಿಗೆ ಮರಳುತ್ತದೆ. ಇದಾದಮೇಲೆ 'ಪೋತರಾಜ' ಬಣದ ಪೂಜಾರಿಗಳ ಮನೆಗೆ ಹೋಗಿ ಪೂಜೆಯನ್ನು ಮಾಡಲಾಗುತ್ತದೆ. ಆಗ ಆ ಪೂಜಾರಿಗಳ ಮಯ್ ಮೇಲೆ ಪೋತರಾಜನು ಬಂದಂತಾಗಿ ಅವರು ನುಗ್ಗಿ ಬರುವರು. ಅವರನ್ನು ತಿಳಿಗೊಳಿಸಿ ಗುಡಿಗೆ ಕರೆದುಕೊಂಡು ಬರಲು ಕರಿಮೇಕೆಯನ್ನು ಕೊಡಲಾಗುತ್ತದೆ ಮತ್ತು ಮಂತ್ರಗಳನ್ನು ಹೇಳಲಾಗುತ್ತದೆ. ಆಗ ಪೋತರಾಜ ಪೂಜಾರಿಗಳು ಮೇಕೆಯನ್ನು ಬಾಯಿಂದ ಕಡಿದು ಅದರ ನೆತ್ತರನ್ನು ಹೀರಿ ಶಾಂತರಾಗುವರು. ಆಮೇಲೆ ಆರತಿಯೊಂದಿಗೆ ಗಾವುಸೇವೆ ಕೊನೆಗೊಳ್ಳುತ್ತದೆ

**ವಸಂತೋತ್ಸವ:** ಇದು ಹಬ್ಬದ ಕಡೆಯ ದಿನ ನಡೆಯುವುದು. ಎಲ್ಲರೂ ಗುಡಿಯ ಮುಂದೆ ಸೇರಿ ಕರಗದ ಕೂಡುದಲೆ(ಯಶಸ್ಸು)ಯನ್ನು ಆಚರಿಸುವರು. ಚಿಕ್ಕವರಿಗೆ ದೊಡ್ಡವರಿಗೆ ಅಂದು ನಲಿವಿಗಾಗಿ ಆಟಗಳನ್ನು ಏರ‍್ಪಡಿಸಿರುತ್ತಾರೆ. ಎಲ್ಲರೂ ಪಾಲ್ಗೊಂಡು ಸಂತಸಪಡುತ್ತಾರೆ. ಇರುಳಲ್ಲಿ ಮೊದಲ ದಿನ ಏರಿಸಿದ್ದ ಬಾವುಟವನ್ನು ಇಳಿಸಲಾಗುತ್ತದೆ. ಬಾವುಟಗಂಬಕ್ಕೆ ಪೂಜೆಯನ್ನು ಮಾಡಿ ಕಯ್ಯಿಗೆ ಕಟ್ಟಿಕೊಂಡಿದ್ದ ದಾರವನ್ನು (ಕಂಕಣ) ಗುಡಿಗೆ ಹಿಂದಿರುಗಿಸಲಾಗುತ್ತದೆ.

**ಕರಗ ಮತ್ತು ದರಗಾ ನಂಟು:**

ಕರಗ ಮೆರವಣಿಗೆಯು, ಸಾಗುತ್ತ ದಾರಿ ನಡುವೆ ಅರಳೆಪೇಟೆ(ಕಾಟನ್ ಪೇಟೆ)ಯಲ್ಲಿರುವ ಒಂದು ದರಗಾದ ಮುಂದೆ ನಿಲ್ಲುತ್ತದೆ. ಕರಗಕ್ಕೂ ದರಗಾಕ್ಕೂ ಏನು ನಂಟು ಎಂದು ಅಚ್ಚರಿ ಆಗಬಹುದು. ಮುಸ್ಲಿಂ ಸಮುದಾಯಕ್ಕೂ ಈ ಹಬ್ಬಕ್ಕೂ

ಇರುವ ನಂಟಿನ ಹಿಂದೆ ಒಂದು ಕತೆ ಇದೆ. ಕರಗ ಹೊತ್ತು ನಡೆಯುವವರು ಅದನ್ನು ಬೀಳದ ಹಾಗೆ ಕಾಳಜಿ ವಹಿಸಬೇಕು, ಒಂದೊಮ್ಮೆ ಬೀಳಿಸಿದರೆ ಅದು ಕಡೆಗಣಿಸಲಾಗದ ತಪ್ಪು ಎಂಬ ನಂಬಿಕೆ ಇದೆ. ಹದಿನೆಂಟನೆ ಶತಮಾನದಲ್ಲಿ ಹಜರತ್ ತವಕಲ್ ಮಸ್ತಾನ್ ಶಾ ಎಂಬ ಮುಸ್ಲಿಂ ಸಂತರೊಬ್ಬರಿದ್ದರಂತೆ. ಅವರಿದ್ದ ಕಾಲದಲ್ಲಿ ಒಮ್ಮೆ, ಕರಗವನ್ನು ಹೊತ್ತಿದ್ದವರೊಬ್ಬರು, ಸಂತರಿದ್ದ ಜಾಗದಲ್ಲಿ ನಿಂತು ಕರಗ ಬೀಳದಂತೆ ಹರಸಿ ಎಂದು ಕೇಳಿದರೆಂದೂ, ಅದಕ್ಕೆ ಸಂತರು ಕರಗ ಬೀಳದಂತೆ ಹಾರಯ್ಸಿದರೆಂದೂ ಎನ್ನುವ ಹಿನ್ನೆಲೆಯಿದೆ. ಆ ನಡವಳಿಯೇ(ಸಂಪ್ರಾದಾಯ) ಇಂದಿಗೂ ಉಳಿದುಕೊಂಡಿದೆ. ಕರಗದ ಪೂಜೆಯ 3 ದಿವಸ ಮುಂಚೆ ಮತ್ತು ಕರಗದ ದಿನವೂ ಈ ದರಗಾಕ್ಕೆ ಬೇಟಿ ನೀಡಲಾಗುತ್ತದೆ. ಕರಗವನ್ನು ಹೊತ್ತು ಈ ದರಗಾವನ್ನು 3 ಬಾರಿ ಸುತ್ತು ಹೊಡೆಯಲಾಗುತ್ತದೆ ಎಂದು ಹೇಳಲಾಗುತ್ತದೆ.

***(ಮಾಹಿತಿ ಸೆಲೆ***: wikipedia, karaga.com, pradeepmgp, belgaurukaraga***)***

# ಹೂವಿನ ಕರಗ : ಬೆಂಗಳೂರು ಕರಗದಲ್ಲೊಂದು ಬಾಗ

– ಅನ್ನದಾನೇಶ ಶಿ. ಸಂಕದಾಳ.



"ಕರಗ: ನಮ್ಮ ಬೆಂಗಳೂರ ದೊಡ್ಡ ಹಬ್ಬ" ಬರಹದಲ್ಲಿ ಕರಗ, ಕರಗದ ಹಿನ್ನೆಲೆ, ನಡೆಯುವ ದಿನಗಳು, ಆಚರಣೆಗಳು - ಇವುಗಳ ಬಗ್ಗೆ ತಿಳಿದುಕೊಂಡೆವು. ಹಬ್ಬದ 9 ನೆ ದಿನದಂದು ನಡೆಯುವ ಹೂವಿನ ಕರಗದ ಬಗ್ಗೆ ಈಗ ತಿಳಿಯೋಣ ಬನ್ನಿ.

ಹಬ್ಬದ ಒಂಬತ್ತನೇ ದಿನ 'ಹೂವಿನ ಕರಗ' ಮಾಡಲಾಗುತ್ತದೆ. ಹೆಸರೇ ಹೇಳುವಂತೆ ಈ ಕರಗವನ್ನು ಹೂವಿನಿಂದ(ಮಲ್ಲಿಗೆ) ಮಾಡಲಾಗಿರುತ್ತದೆ. ಇದು ರಾತ್ರಿ ನಡೆಯುವ ಕಾರ್ಯಕ್ರಮ. ಮೂರುತಿಗಳನ್ನು ಮೆರವಣಿಗೆಯಲ್ಲಿ ತಂದು ಬಕ್ತರಿಗೆ ತೋರಿಸಲು, ಅಂದು 'ತೇರುಕಟ್ಟುವ ಮನೆಯವರು' ತೇರುಗಳನ್ನು ಬಣ್ಣ ಬಣ್ಣದ ಬಟ್ಟೆಗಳಿಂದ ಅಂದಗೊಳಿಸುತ್ತಾರೆ. ಅಂದು ಕರಗ ಹೊತ್ತು ಕೊಳ್ಳುವವರು ಹೆಣ್ಣಿನ ಹಾಗೆ ಸೀರೆಯನ್ನು ಉಟ್ಟು ಹೂವನ್ನು ಮುಡಿಯುತ್ತಾರೆ. ಹಾಗೆ ಅವರಿಗೆ ಬಳೆಯನ್ನುತೊಡಿಸಿ ಮದುಮಗಳಾಗಿ ಮಾಡುವರು. ಇದು ತಾತ್ಕಾಲಿಕವಾಗಿ ದ್ರವ್ಪದಿಯಾಗುವ ಬಗೆ ಎಂದು ಹೇಳಲಾಗುತ್ತದೆ.

ಆಮೇಲೆ ಗುಡಿಯ ಒಳಗೆ ಅರ್ಜುನನಿಗೂ ದ್ರವ್ಪದಿಗೂ ಮದುವೆ ಮಾಡುವರು. ಅದು ಆದಿಶಕ್ತಿಯನ್ನು ಕರಗದ ರೂಪದಲ್ಲಿ ಹೊತ್ತುಕೊಳ್ಳಲಿಕ್ಕೆ ಬಲ ನೀಡುತ್ತದೆ ಎನ್ನುವುದು ನಂಬಿಕೆ. ಅಂದು ಕೂಡ 'ಶಕ್ತಿಪೀಟ'ದ ಬಳಿ ಅಂದರೆ ಸಂಪಂಗಿಕೆರೆಯ

ಹತ್ತಿರ ಗಣಾಚಾರಿಗಳು, ಗಂಟೆ ಪೂಜಾರಿಗಳು, ವೀರಕುಮಾರರು ಮತ್ತು ಬಕ್ತರು ಸೇರುವರು. ಪೀಟದ ಹತ್ತಿರ ಮಾಟದಕೋಲು ಮತ್ತು ಬಾಕು(ಕತ್ತಿ) ಇಡಲಾಗುತ್ತದೆ ಮತ್ತು ಅವುಗಳಿಗೆ ಪೂಜೆ ಮಾಡಲಾಗುತ್ತದೆ. ಕರ್ಪೂರವನ್ನು ಹಚ್ಚಿ ಬೆಳಗುತ್ತಾ ದೇವತೆಯನ್ನು ಮತ್ತೊಮ್ಮೆ ನೆನೆಯುತ್ತಾ ರಾತ್ರಿ ಹತ್ತರ ಸುಮಾರಿಗೆ ಮೆರವಣಿಗೆ ಶುರು ಮಾಡುತ್ತಾರೆ.

ಅಲ್ಲಿಂದ ಶುರುವಾದ ಮೆರವಣಿಗೆ 'ಶಕಿಸ್ತಳ'(ಏಳು ಸುತ್ತಿನ ಕೋಟೆ) ಮೂಲಕ ದರ್ಮರಾಯನ ಗುಡಿಯತ್ತ ಬರುತ್ತದೆ. ತಾಳ ಮೇಳಗಳ ನಡುವೆ ಮೆರವಣಿಗೆ ಸಾಗುತ್ತದೆ. ಮೆರವಣಿಗೆ ಗುಡಿ ತಲುಪಿದ ಮೇಲೆ, ಅರ್ಜುನ ಮತ್ತು ದ್ರವ್ಪದಿ ಮೂರುತಿಗಳನ್ನು ಗುಡಿಯಿಂದ ಹೊರತಂದು ಮುಕ್ಯ ತೇರಿನಲ್ಲಿ ಕೂರಿಸಲಾಗುತ್ತದೆ. ಆದಿಶಕ್ತಿಯನ್ನು ಕರಗದ ರೂಪದಲ್ಲಿ ಹೊತ್ತುಕೊಳ್ಳುವವರಿಗೆ ಬೇಕಾದ ಬಲವನ್ನು ಕೊಡುವಂತೆ ಮಂತ್ರಗಳನ್ನು ಹೇಳಿ ಪೂಜೆ ಮಾಡುತ್ತಾರೆ. ಅದಾದ ಮೇಲೆ ಆ ಹೂವಿನ ಕರಗವನ್ನು ಅವರ ಮೇಲೆ ಹೊರಿಸಲಾಗುತ್ತದೆ. ಉಳಿದ ಪಾಂಡವರ ಮೂರುತಿಗಳನ್ನು ಗುಡಿಯಿಂದ ಹೊರತಂದ ಮೇಲೆ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ.

ಮೆರವಣಿಗೆ ಆರಂಬವಾದೊಡನೆ ಗಟ್ಟಿಯಾದ ತಾಳಮೇಳಗಳು ಮೊಳಗುವವು ಮತ್ತು ವೀರಕುಮಾರರು 'ಗೋವಿಂದ ಗೋವಿಂದ' ಅಂತ ಹೇಳುತ್ತಾ ಮತ್ತೊಮ್ಮೆ ಕರ್ಪೂರವನ್ನು ಹಚ್ಚುವವರು. ಆಗ ಕರಗವನ್ನು ಹೊತ್ತಿರುವವರು ಗರ್ಬಗುಡಿಯಿಂದ ಹೊರಗೆ ಬರುತ್ತಾರೆ. ಅದು ಆದಿಶಕ್ತಿಯೇ ಮಿಂಚಿನಂತೆ ಹೊರಬಂದಂತೆ ಕಾಣುತ್ತದೆ ಎಂದು ಬಣ್ಣಿಸಲಾಗುತ್ತದೆ. ದರ್ಮರಾಯನ ಗುಡಿಯಿಂದ ಹೊರಬಂದ ಕರಗವು ಮುಂದುವರೆಯುವ ಮುನ್ನ 'ಬ್ರಹ್ಮ ದೇವರ ತೇರಿಗೆ' ಒಂದು ಸುತ್ತು ಹಾಕಲಾಗುತ್ತದೆ. ಕರಗವು ನಂತರ ಕಬ್ಬನ್ ಪೇಟೆ - ನಗರ್ತ ಪೇಟೆ - ಸಿದ್ದಣ್ಣ ಲಯ್ನ್ - ಗಾಣಿಗರ ಪೇಟೆ - ಚಿಕ್ಕಪೇಟೆ ಬೀದಿ - ಅವೆನ್ಯೂ ಬೀದಿ - ದೊಡ್ಡಪೇಟೆ - ರಣಸಿಂಗ ಪೇಟೆ ( ಕ್ರಿಶ್ಣ ರಾಜ ಮಾರುಕಟ್ಟೆ ಬಳಿ )-ಅಕ್ಕಿ ಪೇಟೆ- ಅರಳೆಪೇಟೆ - ಬಳೆಪೇಟೆ - ಸುಬೇದಾರ್ ಚತ್ರ ಬೀದಿ - ಕುಂಬಾರ ಪೇಟೆ - ಗೊಲ್ಲರ ಪೇಟೆ - ತಿಗಳರ ಪೇಟೆ - ಸುಣ್ಣಕಲ್ ಪೇಟೆ ಮುಕ್ಯ ಬೀದಿಗಳ ಮೂಲಕ ದರ್ಮರಾಯನ ಗುಡಿಗೆ ಹಿಂದಿರುಗುತ್ತದೆ.

ಹಾಗೆ ಸಾಗುತ್ತಾ ದಾರಿಯ ನಡುವೆ ಸಿಗುವ ರಾಮ ಸೇವಾ ಮಂದಿರ, ವೇಣುಗೋಪಾಲ ಸ್ವಾಮಿ ಗುಡಿ, ಬಯ್ರವೇಶ್ವರ ಗುಡಿ, ಮಕ್ಕಳ ಬಸವಣ್ಣ ಗುಡಿ, ಚನ್ನರಾಯ ಸ್ವಾಮಿ ಗುಡಿ, ಚಾಮುಂಡೇಶ್ವರಿ ಗುಡಿ, ಈಶ್ವರ ಗುಡಿ, ಕೋಟೆ ಆಂಜನೇಯನ ಗುಡಿ, ಮುರಹರಿ ಸ್ವಾಮಿ ಮಟ, ಬೀರದೇವರ ಗುಡಿ, ಅಣ್ಣಮ್ಮ ಗುಡಿ, ತುಪ್ಪದ ಆಂಜನೇಯನ ಗುಡಿ, ಚವುಡೇಶ್ವರಿ ಗುಡಿಗಳಲ್ಲಿ ಕರಗಕ್ಕೆ ಪೂಜೆ ಮಾಡಲಾಗುತ್ತದೆ. ಅರಳೆ ಪೇಟೆಯಲ್ಲಿರುವ ಹಜರತ್ ತವಕಲ್ ಮಸ್ತಾನ್ ಶಾ ದರಗಾವನ್ನು 3 ಬಾರಿ ಸುತ್ತು ಹೊಡೆಯಲಾಗುತ್ತದೆ. ಇರುಳಿಡೀ ನಡೆದ ಕರಗ ಮೆರವಣಿಗೆ ಬೆಳಿಗ್ಗೆ ದರ್ಮರಾಯನ ಗುಡಿಗೆ ಬಂದು, ನೆರೆದಿರುವ ಬಕ್ತರಿಗೆಲ್ಲ ದರುಶನವನ್ನು ನೀಡುವ ಮೂಲಕ ಕರಗವು ಕೊನೆಗೊಳ್ಳುತ್ತದೆ. ಗಂಟೆ ಪೂಜಾರಿಗಳು ಗಂಟೆಯ ನಾದದಿಂದ ಕರಗ ಹೊತ್ತಿರುವವರನ್ನು ಗರ್ಬಗುಡಿಗೆ ಕರೆದೊಯ್ಯುವರು ಮತ್ತು ಶಾಂತಿ ಮಂತ್ರಗಳನ್ನು ಹೇಳುತ್ತಾ ಕರಗವನ್ನು ಇಳಿಸುವವರು. ಬಳಿಕ ಮಹಾಮಂಗಳಾರತಿಯನ್ನು ಮಾಡಿ ಅಂದಿಡೀ ದಿನ ಗುಡಿಗೆ ಬರುವ ಬಕ್ತರಿಗೆ ಪ್ರಸಾದ ಹಂಚುವಲ್ಲಿ ಹೂವಿನ ಕರಗವು ಮುಗಿಯುತ್ತದೆ.

***(ಮಾಹಿತಿ ಸೆಲೆ***: *wikipedia, karaga.com*)

***(ಚಿತ್ರ ಸೆಲೆ:*** *mbasics****)***

# ಅಂಬಾರಿಯ ಕತೆ, ಆನೆಗಳ ತಯಾರಿ, ಜಂಬೂಸವಾರಿ!

– ಹರ್‍ಶಿತ್ ಮಂಜುನಾತ್.



‘ಮಯ್ಸೂರು ದಸರಾ ಎಶ್ಟೊಂದು ಸುಂದರ…’ ಹಾಡಿನಲ್ಲಿ ಬಣ್ಣಿಸಿದ್ದಕ್ಕಿಂತಲೂ ಒಂದು ಕಯ್ ಮೇಲೆ ಮಯ್ಸೂರು ದಸರಾದ ಸೊಬಗು. ನಿಜಕ್ಕೂ ಇದರ ಸೊಬಗನ್ನು ತುಂಬಿಕೊಳ್ಳಲು ಎರಡು ಕಣ್ಣು ಸಾಲದು. ದಸರಾ ನಮ್ಮ ನಾಡಹಬ್ಬ. ಇದಕ್ಕೆ ಸಾಕ್ಶಿಯಾಗುವ ಮಯ್ಸೂರಿನಲ್ಲಿ ದಸರಾ ಹಬ್ಬವನ್ನು ವಿಶೇಶ ರೀತಿಯಲ್ಲಿ ನಡೆಸಿಕೊಂಡು ಹೋಗಲಾಗುತ್ತದೆ. ಈ ಸೊಬಗನ್ನು ನೋಡಲು ಜಗತ್ತಿನ ಮೂಲೆಮೂಲೆಗಳಿಂದ ಬಂದ ಮಂದಿ ಒಂದೆಡೆ ಸೇರುತ್ತಾರೆ. ಈ ಕಾರಣಕ್ಕೆ ಮಯ್ಸೂರು ದಸರಾ ಜಗತ್ತಿನೆಲ್ಲೆಡೆ ಹೆಸರುವಾಸಿ. ದಸರಾದ ಮುಕ್ಯ ಸೆಳೆತ ಜಂಬೂಸವಾರಿ. ಸಿಂಗಾರಗೊಂಡ ಆನೆಗಳು ಚಿನ್ನದ ಅಂಬಾರಿಯನ್ನು ಹೊತ್ತು ನಡೆಸುವ ಮೆರವಣಿಗೆ. ದಸರಾ ಹಬ್ಬಕ್ಕೆ ಕಳೆ ಇರುವುದೇ ಈ ಅಂಬಾರಿಯಿಂದ ಎಂದರೆ ತಪ್ಪಾಗಲಾರದು.

**ಮೈಸೂರಿಗೆ ಅಂಬಾರಿ ಹೇಗೆ ಬಂತು?**

ಸುಮಾರು 15 ನೇ ನೂರೇಡಿನಲ್ಲಿ ವಿಜಯನಗರದ ಅರಸರು ದಸರಾ ಹಬ್ಬವನ್ನು ಆರಂಬಿಸಿದರು. ಅವರ ರಾಜದಾನಿಯಾದ ಹಂಪಿಯಲ್ಲಿ ದಸರಾ ನಡೆಯುತ್ತಿತ್ತು. ಈಗಿರುವ ಅಂಬಾರಿಯನ್ನೇ ಆಗಲೂ ಮೆರವಣಿಗೆಗೆ ಬಳಸಲಾಗುತ್ತಿತ್ತು. ವಿಜಯನಗರ ಅರಸು ಮನೆತನದ ಮೊದಲಿಗರಾದ **ಹಕ್ಕ-ಬುಕ್ಕ**ರಿಗೆ ಈ ಅಂಬಾರಿಯು ಕಂಪಿಲ ದೊರೆಗಳಿಂದ ಬಂದಿತ್ತು. ಹೆಚ್ಚಿನವರಿಗೆ **ಗಂಡುಗಲಿ ಕುಮಾರರಾಮ**ನ ಪರಿಚಯವಿದೆ. ಈತ 13 ನೇ ನೂರೇಡಿನ ಹೆಸರುವಾಸಿ ದೊರೆ. ಈತನ ಕಾಲದಲ್ಲಿಯೂ ಈ ಅಂಬಾರಿಯಲ್ಲಿ ದುರ್ಗಾದೇವಿಯನ್ನು ಇರಿಸಿ ಪೂಜಿಸಲಾಗುತ್ತಿತ್ತು. ಅಂಬಾರಿಯಲ್ಲಿ ದುರ್ಗಾದೇವಿಯನ್ನು ಇಟ್ಟು ಪೂಜಿಸುವ ಸಂಪ್ರದಾಯವನ್ನು ಕುಮಾರರಾಮನ ತಂದೆಯಾಗಿದ್ದ **ಕಂಪಿಲರಾಯ**ನು ಶುರುಮಾಡುತ್ತಾನೆ.

ಕಂಪಿಲರಾಯನ ತಂದೆಯಾದ **ಮುಮ್ಮಡಿ ಸಿಂಗ ನಾಯಕ**ನ ಕಾಲದಲ್ಲಿ ಈ ಅಂಬಾರಿಯು ಈಗಿನ ಮಹಾರಾಶ್ಟ್ರದ ದೇವಗಿರಿಯಲ್ಲಿ ಇತ್ತು. ಶತ್ರುಗಳ ದಾಳಿಗೆ ದೇವಗಿರಿ ನಗರವು ನಾಶವಾಗುತ್ತದೆ. ಆಗ ಮುಮ್ಮಡಿ ಸಿಂಗ ನಾಯಕನು ಅಂಬಾರಿಯನ್ನು ಹೊತ್ತೊಯ್ದು ಬಳ್ಳಾರಿಯ ರಾಮದುರ್ಗದ ಕೋಟೆಯಲ್ಲಿ ಬಚ್ಚಿಡುತ್ತಾನೆ. ಬಳಿಕ ಈತನ ಮಗನಾದ ಕಂಪಿಲರಾಯನು ಗಟ್ಟಿಯಾದ ನಾಡನ್ನು ಕಟ್ಟಿದ ಮೇಲೆ ಅಂಬಾರಿಯನ್ನು ಹೊರತಂದು ದುರ್ಗಾದೇವಿಯನ್ನಿಟ್ಟು ಪೂಜಿಸುವ ಸಂಪ್ರದಾಯವನ್ನು ತರುತ್ತಾನೆ. ಇದು ಗಂಡುಗಲಿ ಕುಮಾರರಾಮನ ಕಾಲದವರೆಗೂ ಮುಂದುವರೆಯುತ್ತದೆ.



1327 ರಲ್ಲಿ ದೆಹಲಿ ಸುಲ್ತಾನರ ದಾಳಿಗೆ ಕುಮಾರರಾಮನು ಸಾವನ್ನಪ್ಪುತ್ತಾನೆ. ಅಲ್ಲಿಗೆ ಕಂಪಿಲರ ಆಡಳಿತ ಕೊನೆಗೊಳ್ಳುತ್ತದೆ. ಆ ಹೊತ್ತಿನಲ್ಲಿ ಕಂಪಿಲರ ಅರಮನೆಯ ಸಂಪತ್ತನ್ನು ಕಾಪಾಡುವ ಹೊಣೆಹೊತ್ತ ಹಕ್ಕ-ಬುಕ್ಕರು, ದೆಹಲಿ ಸುಲ್ತಾನರ ಕೈಗೆ ಸಿಗದಂತೆ ಅಂಬಾರಿಯನ್ನು ಮುಚ್ಚಿಟ್ಟು ಕಾಪಾಡುತ್ತಾರೆ. ಬಳಿಕ ಹಕ್ಕ-ಬುಕ್ಕರು ಸೇರಿ ಗಟ್ಟಿಯಾದ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದ ಮೇಲೆ ಅಂಬಾರಿಯನ್ನು ಹೊರತರುತ್ತಾರೆ. ವಿಜಯನಗರದ ಮೊದಲ ದೊರೆಗಳಲ್ಲಿ ಒಬ್ಬನಾದ ಬುಕ್ಕನು ಈಗಿನ ಹಂಪಿಯನ್ನು ಎರಡನೇ ರಾಜದಾನಿಯನ್ನಾಗಿ ಮಾಡಿ ಅಂಬಾರಿಯನ್ನು ಅಲ್ಲಿಗೆ ಸಾಗಿಸುತ್ತಾನೆ. ಅಲ್ಲಿ ಹಂಪಿಯ ದಸರಾ ಹಬ್ಬವನ್ನು ಆರಂಬಿಸಿ ಅಂಬಾರಿಯಲ್ಲಿ ದೇವರನ್ನಿಟ್ಟು ಮೆರೆಸಲಾಗುತ್ತದೆ.

ವಿಜಯನಗರದ ಮನೆತನ ಕೊನೆಯಾದ ಮೇಲೆ ಅಂಬಾರಿಯನ್ನು ಕಾಪಾಡಲು ಆಂದ್ರಪ್ರದೇಶದ ಪೆನಗೊಂಡಕ್ಕೆ ಸಾಗಿಸಲಾಯಿತು. ಬಳಿಕ ಅಂಬಾರಿಯನ್ನು ಕಾಪಾಡುವ ಹೊಣೆ ಶ್ರೀರಂಗಪಟ್ಟಣದ ದೊರೆಗಳಾಗಿದ್ದ ಒಡೆಯರ ಹೆಗಲಿಗೆ ಬಂದಿತು. ಹೀಗೆ ಒಡೆಯರೊಂದಿಗೆ ಅಂಬಾರಿಯು ಮೈಸೂರು ನಗರಕ್ಕೆ ಬರುತ್ತದೆ. ಸುಮಾರು 800 ವರುಶಗಳ

ಹಳಮೆಯನ್ನು ಹೊಂದಿರುವ ಅಂಬಾರಿಯೂ ನಾಡಿನ ಏಳುಬೀಳುಗಳನ್ನು ದಾಟಿಕೊಂಡು ಬಂದು, ಇಂದು ನಮ್ಮ ನಾಡಹಬ್ಬದ ಹೆಮ್ಮೆಯ ಗರಿಯಾಗಿ ಮೆರೆಯುತ್ತಿದೆ.

**ಆನೆಗಳ ತಯಾರಿ ಹೇಗಿರುತ್ತೆ?**

ಶ್ರೀರಂಗಪಟ್ಟಣದಲ್ಲಿ ಸುಮಾರು 1610 ರಲ್ಲಿ **ರಾಜ ಒಡೆಯರ್** ಅವರಿಂದ ಮೊದಲ್ಗೊಂಡ ದಸರಾ ಹಬ್ಬ, ಇಂದಿನ ವರೆಗೂ ಬಕ್ತಿ ಬಾವದ ಬಾಗವಾಗಿ ಮೆರೆಯುತ್ತಾ ಬಂದಿದೆ. ಆದರೆ ಮಯ್ಸೂರಿನ ದಸರಾದಲ್ಲಿ ಎಲ್ಲರ ಗಮನ ಸೆಳೆಯುವುದು ಮಾತ್ರ ಚಿನ್ನದ 750 ಕೆ.ಜಿ. ತೂಕದ ಅಂಬಾರಿ ಮತ್ತು ಅಂಬಾರಿಯನ್ನು ಹೊತ್ತು ನಡೆವ ಆನೆಗಳು. ಒಂದರ್ತದಲ್ಲಿ ಆನೆಗಳೇ ಜಂಬೂಸವಾರಿಯ ರೂವಾರಿಗಳು. ಹೀಗಾಗಿ ಆನೆಗಳು ಇರದ ದಸರಾವನ್ನು ಊಹಿಸಲೂ ಸಾದ್ಯವಿಲ್ಲ. ಸತತವಾಗಿ ತಯಾರಿಯನ್ನು ನಡೆಸಿ ಬೇರೆ ಬೇರೆ ಶಿಬಿರಗಳಿಂದ ತಂಡಗಳಾಗಿ ಆನೆಗಳು ಮಯ್ಸೂರಿಗೆ ಕಾಲಿಡುತ್ತಿದ್ದಂತೆ ದಸರಾ ಹಬ್ಬಕ್ಕೆ ಕಳೆಕಟ್ಟುತ್ತದೆ. ಈ ಬಾರಿ ಮೊದಲನೇ ತಂಡವಾಗಿ ಅರ್ಜುನ, ಬಲರಾಮ, ಸರಳ, ಗಜೇಂದ್ರ, ಅಬಿಮನ್ಯು, ವರಲಕ್ಶ್ಮಿ, ಶ್ರೀರಾಮ, ಬಳಿಕ ಎರಡನೇ ತಂಡವಾಗಿ ವಿಜಯ, ವಿಕ್ರಮ, ಹರ್ಶ, ಗೋಪಿ, ಗೋಪಾಲಸ್ವಾಮಿ, ಪ್ರಶಾಂತ, ದುರ್ಗಾಪರಮೇಶ್ವರಿ ಆನೆಗಳು ಬಂದಿವೆ. ಹೀಗೆ ಬರುವ ಆನೆಯ ಪಡೆಗೆ ಅರಮನೆ ಅಂಗಣದಲ್ಲಿ ಹಲವು ಬಗೆಯ ಉಪಚಾರಗಳನ್ನು ಕೊಟ್ಟು ಬಹಳಶ್ಟು ಆದರದಿಂದ ನೋಡಿಕೊಳ್ಳಲಾಗುತ್ತದೆ. ದಿನನಿತ್ಯ ಗೋದಿ, ಉದ್ದು, ಕುಸಲಕ್ಕಿ, ಈರುಳ್ಳಿ, ಹಸಿ ತರಕಾರಿಗಳು, ತೆಂಗಿನಕಾಯಿ, ಬೆಣ್ಣೆ, ಬತ್ತ, ಕಬ್ಬು, ಬೆಲ್ಲ, ಹಿಂಡಿ, ಉಚ್ಚೆಳ್ಳು ಇದರ ಜೊತೆಗೆ ಹಸಿರ ಮೇವುಗಳಾಗಿ ಮರದ ಸೊಪ್ಪು, ಹುಲ್ಲನ್ನೂ ನೀಡಲಾಗುತ್ತದೆ. ಜಂಬೂಸವಾರಿಯಲ್ಲಿ ಅಂಬಾರಿ ಹೊರುವ ಆನೆಗೆ ಅಂಬಾರಿಯಶ್ಟೇ ತೂಕದ ಮರದ ಹಲಗೆಯನ್ನು ಹೊರಿಸಿದರೆ, ಉಳಿದ ಆನೆಗಳಿಗೆ ಮರಳಿನ ಮೂಟೆಗಳನ್ನು ಹೊರಿಸಿ ತಯಾರಿ ನಡೆಸಿ ಜಂಬೂಸವಾರಿಗೆ ಸಜ್ಜುಗೊಳಿಸುತ್ತಾರೆ. ಕಳೆದ ವರುಶದಂತೆ ಈ ವರುಶವೂ ಕೂಡ ಅರ್ಜುನ ಆನೆ ಅಂಬಾರಿಯನ್ನು ಹೊತ್ತು ಸಾಗಲಿದ್ದಾನೆ.

**ಜಂಬೂಸವಾರಿ:**

ದಸರಾ ಹಬ್ಬದ ದಿನದ ಮದ್ಯಾಹ್ನದ ಬಳಿಕ ಅರಮನೆಯ ಬಲರಾಮ ದ್ವಾರದಲ್ಲಿ ಸಂಪ್ರಾದಾಯಕ ವಿದಿವಿದಾನಗಳು ಮುಗಿದಮೇಲೆ ಅರಮನೆಯ ಒಳಾವರಣದಲ್ಲಿ ಜಂಬೂಸವಾರಿ ಮೊದಲ್ಗೊಳ್ಳುತ್ತದೆ. ಅಂಬಾರಿ ಸಾಗುವ ಇಕ್ಕೆಲಗಳಲ್ಲಿಯೂ ನೆರೆಯುವ ಲಕ್ಶಾಂತರ ಮಂದಿಯ ನಡುವೆ ಚಿನ್ನದ ಅಂಬಾರಿ ಮೆರವಣಿಗೆ ನಡೆಯುತ್ತದೆ. ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯನ್ನು ಕುಳ್ಳಿರಿಸಿ ರಾಜಬೀದಿಯಲ್ಲಿ ನಡೆಯುವ ಸೊಗಸು ದಸರಾಕ್ಕೆ ದೊಡ್ಡ ಗರಿ ಮೂಡಿಸಿದೆ. ಅರಮನೆ ಆವರಣದಿಂದ ಬನ್ನಿಮಂಟಪದತ್ತ ಸಾಗುವ ನೋಟ ಕಣ್ಮನ ತಣಿಸುತ್ತಿವೆ. ಚಿನ್ನ, ಬೆಳ್ಳಿ, ಮುತ್ತಿನ ಸರ, ಹೂವಿನ ಹಾರದಿಂದ ಸಿಂಗರಿಸಿದ ಅಂಬಾರಿಯನ್ನು ಹೊತ್ತ ಆನೆ ಮತ್ತು ಜೊತೆಗೆ ಇತರೆ ಹನ್ನೊಂದು ಆನೆಗಳು, ಸೇರಿದಂತೆ ಜಂಬೂಸವಾರಿಯಲ್ಲಿ ಒಟ್ಟು ಹನ್ನೆರಡು ಸಿಂಗಾರಗೊಂಡ ಆನೆಗಳ ಮೆರವಣಿಗೆ ನೋಡುಗರಿಗೆ ಬೆರಗು ಮೂಡಿಸುವಂತದ್ದು. ಅಲ್ಲದೇ ಈ ಮೆರವಣಿಗೆಯಲ್ಲಿ ಅರಮನೆಯ ಆನೆ, ಕುದುರೆಗಳೂ ಪಾಲ್ಗೊಳ್ಳುತ್ತವೆ. ಇದರ ಜೊತೆಗೆ ಕೊನೆಯಿಲ್ಲದಶ್ಟು ಮನರಂಜನೆ.

ಮೆರವಣಿಗೆಯ ಜೊತೆ ಸಾಗುವ ಕಂಸಾಳೆ ಕುಣಿತ, ತಾಳವಾದ್ಯ, ಕುಶಾಲ ತೋಪುಗಳ ಸದ್ದು, ಕಲಾತಂಡಗಳ ಕುಣಿತ, ಬಿತ್ತಿ ಚಿತ್ರಗಳು, ಮಂದಿಯನ್ನು ಸೆಳೆಯುವಂತದ್ದು. ಕನ್ನಡ ನಾಡ ಮೂಲೆ ಮೂಲೆಗಳಿಂದ ಬರುವ ಕಲಾತಂಡಗಳು ತಮ್ಮ ಕಲೆಯನ್ನು ಹೊರಹಾಕಿದರೆ, ದಮಾಮಿ ಕುಣಿತ, ಪೂಜಾ ಕುಣಿತ, ಡೊಳ್ಳು ಕುಣಿತ, ಕುದುರೆ ಕುಣಿತ, ಬೇಡರ ಕುಣಿತ, ಗಾರುಡಿ ಗೊಂಬೆ, ಹುಲಿವೇಶ, ಸಂಬಾಳ ವಾದನ ಮನಕೆ ಮುದ ನೀಡುತ್ತದೆ. ಕನ್ನಡ ನಾಡ ಕಾಪುಗರ ಪಂಜಿನ ಕವಾಯಿತು ನಡೆಸಿದರೆ, ಇಂದಿನ ಸೆಳೆತಗಳಾದ (ಲೇಸರ್ ಶೋ, ಮೋಟಾರ್ ಸೈಕಲ್ ಚಳಕಗಳು ಮತ್ತು ಸರ್ಕಸ್)ಗಳು ಕಣ್ಮನಕೆ ನಲಿವು ತುಂಬುವಂತಹದ್ದು.

*(**ಮಾಹಿತಿ ಸೆಲೆ:** wiki_Dasara, wiki_Vijayanagara_Dynasty, Vijayanagara_Origin, sanjevani)*
*(**ಚಿತ್ರ ಸೆಲೆ:** mysoredasara.org, newskarnataka.com)*

# ಯುಗಾದಿ : ಹೊಸತಿಗೆ ಮುನ್ನುಡಿ

– [ಹರ‍್ಶಿತ್ ಮಂಜುನಾತ್](#).



ಹೊತ್ತು ಉರುಳಿ ಉರುಳಿ ಓಡುತಿದೆ. ಹಳೆ ಏಡು ಕಳೆದು ಹೊಸ ಏಡಿನೆಡೆಗೆ ನಮ್ಮೆಲ್ಲರ ತಂದು ನಿಲ್ಲಿಸಿದೆ! ಇದು ನಮಗೆಲ್ಲರಿಗೂ ಯುಗಾದಿ ಹಬ್ಬದ ಸವಿ ಹೊತ್ತು. ಹಳೆ ನೋವ ಮರೆತು ಹೊಸತನ್ನು ಹಂಬಲಿಸಿ ಬರಮಾಡಿಕೊಳ್ಳುವ ನಲಿವಿನ ಹೊತ್ತು. ಯುಗಾದಿ ಹಬ್ಬವು ನಮ್ಮ ನಾಡಿನ ಮಂದಿಗೆ ಹೆಚ್ಚುಗಾರಿಕೆಯ ಹಬ್ಬಗಳಲ್ಲೊಂದು. ಕಾರಣ ಯುಗಾದಿ ಹಬ್ಬವು ಹೊಸ ಏಡಿನ ಮೊದಲಿದ್ದಂತೆ. ಈ ಹೊಸ ಏಡನ್ನು ನಲಿವಿನಿಂದ ಬರಮಾಡುವಲ್ಲಿ ನಾಡ ಮಂದಿ ಅಣಿಯಿಟ್ಟಿರುತ್ತಾರೆ. ಯುಗಾದಿಯಲ್ಲಿ ಎರಡು ಬಗೆಗಳಿವೆ. ಒಂದು ಚಂದ್ರಮಾನ ಯುಗಾದಿ ಮತ್ತೊಂದು ಸೌರಮಾನ ಯುಗಾದಿ. ಚಂದ್ರನ ಸುತ್ತುವಿಕೆಯ ನಾಳುಗಳ ಲೆಕ್ಕಾಚಾರದ ಮೇಲೆ ಚಾಂದ್ರಮಾನ ಯುಗಾದಿ ಮತ್ತು ಸೂರ‍್ಯನ ಸುತ್ತುವಿಕೆಯ ನಾಳುಗಳ ಲೆಕ್ಕಾಚಾರದ ಮೇಲೆ ಸೌರಮಾನ ಯುಗಾದಿಯನ್ನು ಮಾಡಲಾಗುತ್ತದೆ.

ಚಂದ್ರನ ಪ್ರತೀ ಸುತ್ತಿಗೂ ಒಂದು ತಿಂಗಳು ಬೇಕು. ಹೀಗೆ ಒಟ್ಟು ಹನ್ನೆರಡು ಸುತ್ತಿಗೆ ಒಂದು ಏಡು. ಹೀಗೆ ಏಡಿನ ಮೊದಲ ದಿನವನ್ನು ಯುಗಾದಿಯಾಗಿ ಆಚರಿಸಲಾಗುತ್ತದೆ. ಈ ದಿನದಂದು ವಿಶ್ಣು ದೇವನು ಮೀನಿನ ರೂಪ ತಾಳಿದನೆಂದು ಕತೆಯಿದೆ. ಈ ದಿನವನ್ನು ಕರ‍್ನಾಟಕದಲ್ಲಿ ಮತ್ತು ಆಂದ್ರ ಪ್ರದೇಶದಲ್ಲಿ ಯುಗಾದಿ ಎಂದು ಕರೆದರೆ, ಕೇರಳದಲ್ಲಿ ವಿಶು

ಹಬ್ಬವೆಂದೂ, ಗೋವಾದಲ್ಲಿ ಸಂವತ್ಸರಪಾಡ್ವೊ, ತಮಿಳುನಾಡಿನಲ್ಲಿ ಪುತಾಂಡು, ಮಹಾರಾಶ್ಟ್ರದಲ್ಲಿ ಗುಡಿಪಾಡ್ಯ, ಪಂಜಾಬಿನಲ್ಲಿ ಬಯ್ಸಾಕಿ, ಸಿಂದಿಯವರು ಚೇತಿಚಾಂದ್ ಎಂಬ ಹೆಸರಿನಲ್ಲಿ ಆಚರಿಸುತ್ತಾರೆ.

ಮುಂಜಾನೆ ಸೂರ‍್ಯ ಹುಟ್ಟುವುದಕ್ಕೂ ಮೊದಲೇ ಎದ್ದು ಮಯ್ಗೆ ಎಣ್ಣೆಯನ್ನು ತಿಕ್ಕಿ, ಬಿಸಿ ನೀರಿನಲ್ಲಿ ಮಿಂದು, ಹೊಸ್ತಿಲು ತೊಳೆದು ಕುಂಕುಮ ಹಚ್ಚಿ, ಬಾಗಿಲಿಗೆ ತೋರಣ ಕಟ್ಟಿ, ದೇವರಿಗೆ ಪೂಜೆ ಕೆಲಸಗಳನ್ನು ನೆರವೇರಿಸಿ ತಮ್ಮವರೊಂದಿಗೆ ಬೇವು ಬೆಲ್ಲ ಹಂಚಿಕೊಂಡು ತಿನ್ನುವ ನಲಿವಿನ ಹೊತ್ತು. ಹೀಗೆ ಎಳ್ಳು ಬೆಲ್ಲ ತಿನ್ನುವಾಗ ಎಲ್ಲರಿಗೂ ಒಳ್ಳೆಯ ಆರೋಗ್ಯ, ಸಕಲ ಸಿರಿವಂತಿಕೆ, ನಲಿವಿನ ಬದುಕು ಸಿಗಲೆಂದು ಬಯಸುವುದು ವಾಡಿಕೆ.

ಮನವರಳಿದೆ ಮನೆ ಬೆಳಗಿದೆ
ಯುಗಾದಿ ಮರಳಿ ಬರುತಿದೆ
ನೂರಾಸೆಗೆ ಮೊದಲಾಗಿದೆ
ಹೊಸ ಏಡ ಹೊತ್ತು ತರುತಿದೆ.

ಹಣ್ಣೆಲೆಗಳು ನೆಲಕುರುಳಿ
ಚಿಗುರೆಲೆಗಳು ಹಸಿರಾಗಿ
ಪಕ್ಶಿ ಸಂಕುಲವು ಗರಿಬಿಚ್ಚಿ
ನವ ಚೈತನ್ಯದಿ ನಳನಳಿಸುತ
ನೂರಾಸೆಗೆ ಮೊದಲಾಗಿದೆ
ಯುಗಾದಿ ಮರಳಿ ಬರುತಿದೆ

ನೋವು ನಲಿವ ಬುತ್ತಿಗಂಟು
ಬೇವುಬೆಲ್ಲದ ಒಂದಣದಲ್ಲುಂಟು
ಅಂದಕಾರವ ದೂರವಿರಿಸಿ
ಇರುಳ ಸೀಳಿ ಬೆಳಕಿರಿಸಿ
ಹೊಸತನಕೆ ಜಗವರಳಿದೆ
ನೂರಾಸೆಗೆ ಮೊದಲಾಗಿದೆ
ಯುಗಾದಿ ಮರಳಿ ಬರುತಿದೆ
ಹೊಸ ಏಡ ಹೊತ್ತು ತರುತಿದೆ.

(***ಚಿತ್ರ ಸೆಲೆ:*** ***mangalorean.com***)

# ಸುಗ್ಗಿ – ನಮ್ಮಲ್ಲೊಂದು ಒಕ್ಕಲಾಟ

– ಹರ್ಶಿತ್ ಮಂಜುನಾತ್.



ಸುಗ್ಗಿ ಬಂದಿದೆ, ಹಿಗ್ಗನು ತಂದಿದೆ. ನಮ್ಮ ನಾಡಿನ ಮಂದಿಗೆಲ್ಲಾ…!

ಹವ್ವ ನಮಗಿದು ಸುಗ್ಗಿಯ ಕಾಲ. ಜನವರಿ ತಿಂಗಳ ಕೊರೆ ಬೀಳುವ ಹೊತ್ತಿನಲ್ಲಿ ಆಚರಿಸಲ್ಪಡುವ ಸುಗ್ಗಿಗೆ ಇನ್ನೊಂದು ಹೆಸರು ಸಂಕ್ರಾಂತಿ ಎಂದು. ಅಲ್ಲದೇ **ಒಕ್ಕಲಾಟ** ಎಂಬ ಹೆಸರೂ ಮಂದಿಯ ನಡುವೆ ಬಳಕೆಯಲ್ಲಿದೆ. ಜೂನ್ ತಿಂಗಳಲ್ಲಿ ಶುರುವಾಗುವ ಬಿತ್ತನೆಯ ಬಳಿಕ ಜನವರಿ ಹೊತ್ತಿನಲ್ಲಿ ಪಡೆಯುವ ಪಸಲಿನ ನಲಿವನ್ನು ತನ್ನವರೊಂದಿಗೆ ಹಂಚಿಕೊಂಡು ಹಬ್ಬದಂತೆ ಆಚರಿಸಿ ಅನುಬವಿಸುವ ಹೊತ್ತಿದು. ನಾಡಿನಲ್ಲೀಗ ಬತ್ತದ ಕುಯ್ಲಿನ ನಲಿವು. ಎಲ್ಲೆಡೆ ಬೆಳೆದ ಬೆಳೆಗಳ ಪಸಲನ್ನು ಕಯ್ಗೆತ್ತಿಕೊಳ್ಳುವ ಕೆಲಸ ಜೋರಾಗಿಯೇ ನಡೆಯುತ್ತಿದೆ. ತಾವು ಬೆಳೆದ ಬೆಳೆಯನ್ನು ಮನೆತುಂಬಿಕೊಳ್ಳುವ ಕೆಲಸದಲ್ಲಿ ರೈತರು ನಿರತರಾಗಿದ್ದಾರೆ.

ಇದಕ್ಕೂ ಮುನ್ನಾ ಸಾಮಾನ್ಯವಾಗಿ ಏಪ್ರಿಲ್ ತಿಂಗಳಲ್ಲಿ ಬೀಳುವ ಅಶ್ವಿನಿ ಮಳೆಯಿಂದ ಹೊಲಗೆಯ್ಮೆಯ ಕೆಲಸಗಳು ಮೊದಲ್ಗೊಳ್ಳುತ್ತವೆ. ಅಶ್ವಿನಿ ಮಳೆಯ ಬಳಿಕ ಬೀಳುವ ಬರಣಿ ಮಳೆಯಿಂದ ಬೇಸಾಯದ ಕೆಲಸಗಳು ಶುರುವಾಗುತ್ತದೆ. ಈ ಹೊತ್ತಿಗಾಗಲೇ ಯುಗಾದಿಯ ನಲಿವು ನಮ್ಮದು. ಯುಗಾದಿ ಹಬ್ಬಕ್ಕೆ ಏಳು ದಿನಗಳ ಹಿಂದು-ಮುಂದಾಗಿ ಮುಂಗಾರು ಮಳೆ ಬೀಳುತ್ತದೆ. ಆದರೆ ಮುಂಗಾರು ಮಳೆ ಬಿದ್ದ ಮಾತ್ರಕ್ಕೆ ಹೊಲಗೆಯ್ಮೆಯು ಶುರುವಾಗುವುದಿಲ್ಲ. ಬದಲಾಗಿ ನೆಲ ನೆನೆದು

ತೇವ ಹೀರಿಕೊಳ್ಳಲು ಬಿಡುತ್ತಾರೆ. ಕಾರಣ ನೆಲದ ಪಲವತ್ತತೆ ಹೆಚ್ಚಿಸುವಲ್ಲಿ ನೆರವಾಗುವ ಕೆಲ ಸಣ್ಣ ಉಸಿರಿಗಳು ಈ ನೆಲ ನೆನೆಯುವ ಕೆಲಸದಲ್ಲಿ ಹುಟ್ಟಿ ಬೆಳವಣಿಗೆ ಹೊಂದುತ್ತವೆ. ನೆಲ ನೆವೆಯಾದ ಬಳಿಕ ಹೊಲಕ್ಕೆ ಗೊಬ್ಬರ-ಗೋಡು ಹಾಕುವುದು, ಬೇಲಿ, ಉದಿ-ಬದು ಗಟ್ಟಿಗೊಳಿಸುವ ಕೆಲಸಗಳು ಮುಂದುವರಿಯುತ್ತವೆ. ಈ ಹೊತ್ತಿಗಾಗಲೇ ಮಳೆ ಶುರುವಾಗಿರುತ್ತದೆ. ಹಾಗಾಗಿ ಗೊಬ್ಬರ ಹಾಕಿದ ಬಳಿಕ ಬೀಳುವ ಒಂದು ಮಳೆಯನ್ನು ನೋಡಿಕೊಂಡು ನಾಟಿಗರು ಪೂಜೆಯೊಂದಿಗೆ ಉಳುಮೆಯ ಕೆಲಸವನ್ನು ಶುರುವಿಡುತ್ತಾರೆ. ಆಗಸ್ಟ್ ತಿಂಗಳಿನ ಹೊತ್ತಿಗಾಗಲೇ ಬಿತ್ತಿದ ಬೀಜ ಮೊಳೆತು, ಎರಡೆಲೆ ಬಿಟ್ಟು, ಬೆಳೆದು, ಮುಂದೆ ತೆನೆಯಾಗಿ, ತೆನೆ ಬಲಿತು ಹಣ್ಣಾಗಿ ಜನವರಿಯ ಹೊತ್ತಿಗೆ ಕಟಾವಿಗೆ ಸಿದ್ದವಾಗುತ್ತದೆ.

ಒಂದು ಕಡೆ ಬೆಳೆ ಕಟಾವಿಗೆ ಸಿದ್ದವಾದರೆ, ಇನ್ನೊಂದು ಕಡೆ ಒಕ್ಕಲಾಟ ಮಾಡಲು ಕಣ ಮಾಡುವುದೇ ನಾಟಿಗರಿಗೆ ಹಬ್ಬ. ನಾಟಿಗಾರರು ತಮ್ಮ ಹೊಲ, ಮನೆಯ ಆಸು ಪಾಸಿನಲ್ಲಿ ಕಣ ಮಾಡಿಕೊಳ್ಳುತ್ತಿದ್ದರು. ನೀರು, ಸಗಣಿ, ಮಣ್ಣು ಹಾಕಿ, ದನ, ಕುರಿಗಳಿಂದ ತುಳಿಸಿ ಕಣ ಮಾಡುತ್ತಾರೆ. ಕೆಲವರಂತೂ ರಸಗಣ ಎಂದು ವಾರಗಟ್ಟಲೇ ಕಣದ ತಯಾರಿ ಮಾಡುತ್ತಾರೆ. ಹೀಗೆ ಕಣ ತಯಾರಾಗುತ್ತಿದ್ದಂತೆ ಹೊಲದಲ್ಲಿ ಕಟಾವಿನ ಕೆಲಸಗಳು ಮೊದಲ್ಗೊಳ್ಳುತ್ತವೆ. ಒಂದು ಒಳ್ಳೆಯ ಹೊತ್ತು ನೋಡಿಕೊಂಡು ಪೂಜೆ ಮಾಡಿ ಮೊದಲು ಎರಡು ಮೀಸಲು ತೆನೆಯನ್ನು ಕಟಾವು ಮಾಡಿ ಒಕ್ಕಲಾಟದ ಪೂಜೆಗೆಂದು ತೆಗೆದಿಡಲಾಗುತ್ತದೆ. ಬಳಿಕ ಕಟಾವಿನ ಕೆಲಸಗಳು ಮುಂದುವರೆಯುತ್ತವೆ. ಹೀಗೆ ಕಟಾವಾದ ತೆನೆಯನ್ನು ಎರಡು ದಿನ ಹೊಲದಲ್ಲಿ ಬಿಡಲಾಗುತ್ತದೆ.

ಬಳಿಕ ತೆನೆಯನ್ನು ಹೊರೆಕಟ್ಟಿ ಅದನ್ನು ಕಣಕ್ಕೆ ಹೊತ್ತೊಯ್ಯಲಾಗುತ್ತದೆ. ತೆನೆಯ ಹೊರೆಗೆ ಮಲೆನಾಡು ಬಾಗಗಳಲ್ಲಿ ತೆನೆಗಂಟು ಎಂದೂ ಕೂಡ ಹೇಳುತ್ತಾರೆ. ಹೀಗೆ ಬೆಳೆ ಕಟಾವಾಗಿ ಕಣಕ್ಕೆ ಸಾಗುವ ಹೊತ್ತಿಗೆ ನಾಟಿಗಾರರ ನಡುವೆ ಅಡಿಯಿಡುವುದೇ ಸುಗ್ಗಿಯ ನಲಿವು. ಕೊಯ್ಲು ಶುರುವಾಗಿ ಕಣಕ್ಕೆ ಸಲು ಬಂದು ಬೀಳುತ್ತಿದ್ದಂತೆ ಹಗಲು ರಾತ್ರಿಯ ಪರಿವೇ ಇಲ್ಲದೆ ಅಲ್ಲಿ ಒಂದು ಸಾಂಸ್ಕೃತಿಕ ಲೋಕವೇ ಬಿಚ್ಚುಕೊಳ್ಳುತ್ತದೆ. ಹಾಡು, ಕುಣಿತ ರಂಗೇರುತ್ತದೆ. ಅದೊಂದು ತೆನೆಯನ್ನು ಕಯ್ಗೆ ಪಡೆದು ದಕ್ಕಿಸಿಕೊಂಡ ಲೆಕ್ಕ ಇಡುವ ಹೆಮ್ಮೆಯ ತಾಣ. ತನ್ನ ಒಡನಾಡಿಗಳಾಗಿ ದುಡಿವ ಜಾನುವಾರುಗಳಿಗೆ ಬೇಕಾಗುವ ಮೇವನ್ನು ಕಾಪಿಡುವ ಜಾಗವದು.

ಹೀಗೆ ಗದ್ದೆ ಕೊಯ್ದು ಹೊರೆಯನ್ನು ಗೊಣಬೆ ಹಾಕಲಾಗುತ್ತದೆ. ಅಂದರೆ ಬತ್ತದ ಹೊರೆಯನ್ನು ಗದ್ದೆಯಲ್ಲಿ ಕಟಾವು ಮಾಡಿ ಹೊರೆ ಕಟ್ಟಿ ತಂದು ಒಟ್ಟಿಗೆ ಹಾಕುವುದು. ಗೊಣಬೆ ಎಂಬ ಪದವು ಮಲೆನಾಡಿನ ಶಿವಮೊಗ್ಗ ಬಾಗದಲ್ಲಿ ಬಳಕೆಯಲ್ಲಿರುವ ಪದ. ಹಾಗೆಯೇ ಚಿಕ್ಕಮಗಳೂರು ಬಾಗಗಳಲ್ಲಿ ಬೆಣಬೆ ಮತ್ತು ಬೆಣವೆ ಎಂಬ ಪದ ಬಳಕೆ ಇದ್ದರೇ ಹಾಸನದ ಕಡೆ ಬಣವೆ ಎನ್ನಲಾಗುತ್ತದೆ. ಆದರೆ ಗೊಣಬೆ ಎಂಬ ಪದವು ಹೆಚ್ಚಾಗಿ ಮಂದಿಯ ನಡುವೆ ಬಳಕೆಯಲ್ಲಿದೆ. ಗೊಣಬೆಯು ನೋಡಲು ಗೋಪುರದ ಆಕಾರದಲ್ಲಿರುತ್ತದೆ. ಕಾರಣ ಈ ಗೊಣಬೆಯ ಬುಡವನ್ನು ದುಂಡಾಕಾರವಾಗಿ ಹಾಕಲಾಗುತ್ತದೆ. ಹೀಗೆ ದುಂಡಾಕಾರವಾಗಿ ಹಾಕುತ್ತಾ ಹಾಕುತ್ತಾ ಹೊರೆಯನ್ನು ಏರಿಸುತ್ತಾ ಬಂದು ಗೊಣಬೆಯ ತುದಿಯು ಚೂಪಿನ ಆಕಾರ ಬರುವಂತೆ ಮಾಡಲಾಗುತ್ತದೆ. ಗೊಣಬೆ ಕಟ್ಟುವ ಹೊತ್ತಲ್ಲಿ ಹೊರೆಯ ತೆನೆಯ ಬಾಗವನ್ನು ಒಳಮುಕವಾಗಿ ಇರಿಸಿದರೆ, ದಂಡಿನ ಬಾಗವನ್ನು ಹೊರಮುಕವಾಗಿ ಇರಿಸಲಾಗುತ್ತದೆ. ಇದರಿಂದ ತೆನೆಯಿಂದ ಉದುರಿದ ಬತ್ತವು ಗೊಣಬೆಯ ಒಳಗೆಯೇ ಉಳಿದುಕೊಳ್ಳುತ್ತದೆ. ಇದು ಬತ್ತವನ್ನು ರಾಶಿ ಮಾಡುವ ಹೊತ್ತಿನಲ್ಲಿ ನೆರವಾಗುತ್ತದೆ. ಹೀಗೆ ಗೊಣಬೆಯ ಮೇಲೆ

ಹೊದಿಕೆ ಹೊದಿಸುವ ಮುನ್ನ ಗೊಣಬೆಯ ಮೇಲೆ ಒಂದು ಚೆಂಡು ಹೂವಿನ ಗಿಡ ನಿಲ್ಲಿಸಿ ಅದರ ಮೇಲೆ ಹುಲ್ಲುಕಟ್ಟಿ ಮುಚ್ಚಿಬಿಡಲಾಗುತ್ತದೆ.

ಗೊಣಬೆಯನ್ನು ಹೆಚ್ಚಿನ ಕಾಳಜಿ ವಹಿಸಿ ಕಟ್ಟಲಾಗುತ್ತದೆ. ಎಶ್ಟರಮಟ್ಟಿಗೆಂದರೆ, ಒಂದು ವೇಳೆ ಗೊಣಬೆಯ ಮೇಲೆ ನೀರು ಬಿದ್ದರೆ ಅದು ನೆಲಮುಟ್ಟಲಾರದು. ಅಲ್ಲದೇ ಈ ಕಾಳಜಿಗೆ ಒಂದು ಮುಕ್ಯ ಕಾರಣವೂ ಇದೆ. ಒಂದು ವೇಳೆ ನೀರು ಗೊಣಬೆಯ ಒಳಹೊಕ್ಕರೆ ಹೊರೆ ನೀರಿನಿಂದ ನೆನೆದು ಮುಗ್ಗು ಬರುತ್ತದೆ. ಅದು ಆ ಹೊರೆಯನ್ನೇ ಬಳಕೆಯಿಂದ ಹೊರಗುಳಿಯುವಂತೆ ಮಾಡುತ್ತದೆ. ಅದಕ್ಕೆಂದೆ ಗೊಣಬೆ ಕಟ್ಟುವ ಹೊತ್ತಲ್ಲಿ ಕಾಳಜಿ ವಹಿಸುವ ಜೊತೆ ಜೊತೆಗೆ ಗೊಣಬೆ ಕಟ್ಟಿದ ಬಳಿಕ ಅದರ ಮೇಲೆ ದೊಡ್ಡ ನೀರ‍್ಕರಿಯರಕ(Plastic)ದ ಹೊದಿಕೆಯನ್ನು ಹೊದಿಸಲಾಗುತ್ತದೆ. ಗೊಣಬೆಯನ್ನು ಇಂತಿಶ್ಟು ದಿನದವರೆಗೆ ಇಡಬೇಕೆಂದೇನಿಲ್ಲ. ಕೆಲವರು ಎರಡರಿಂದ ಮೂರು ತಿಂಗಳುಗಳ ವರೆಗೂ ಹಾಗೆಯೇ ಬಿಡುತ್ತಾರೆ. ಮತ್ತೆ ಕೆಲವರು ಅಯ್ದಾರು ದಿನಕ್ಕೇ ತೆಗೆಯುವುದುಂಟು. ಒಟ್ಟಿನಲ್ಲಿ ಕೆಲ ದಿನಗಳವರೆಗೆ ಹೊರೆಯನ್ನು ಒಟ್ಟುಮಾಡಿ ಒಣಗಿಸುವುದು ಗೊಣಬೆ ಕಟ್ಟುವ ಗುರಿ. ಒಟ್ಟಿನಲ್ಲಿ ಕಟ್ಟುವ ಗೊಣಬೆಗಳು ನಾಟಿಗಾರನ ತನ್ನಂಬುಗೆ ಹೆಚ್ಚಿಸುತ್ತಿದ್ದವು, ಅಲ್ಲದೇ ಆ ಗೊಣಬೆಗಳ ಸಾಲು ಮತ್ತು ಎತ್ತರಗಳ ಮೇಲೆ ಹಿಂದಿನ ಕಾಲದಲ್ಲಿ ಅವರ ಶ್ರೀಮಂತಿಕೆಯನ್ನು ಅಳೆಯಾಲಾಗುತ್ತಿತ್ತಂತೆ.

ಹೀಗೆ ಒಂದಶ್ಟು ದಿನಗಳ ಬಳಿಕ ಮುಚ್ಚಿಟ್ಟ ಗೊಣಬೆಯನ್ನು ಬಿಚ್ಚಲಾಗುತ್ತದೆ. ಅಂದರೆ ಇಲ್ಲಿ ಗೊಣಬೆಯನ್ನು ತೆಗೆದು ಕಣದ ನಡುವೆ ಒಂದು ಕಂಬ ಹಾಕಿ ಅದರ ಸುತ್ತಲೂ ದುಂಡಾಕಾರವಾಗಿ ತೆನೆ ಹೊರೆಯನ್ನು ಹಾಕುತ್ತಾ ಬರಲಾಗುತ್ತದೆ. ಹೀಗೆ ಹಾಕುವ ಕಂಬವನ್ನು ಮೇಟಿ ಎನ್ನುತ್ತಾರೆ ಮತ್ತು ಗೊಣಬೆಯಿಂದ ಮೇಟಿಯ ಸುತ್ತ ಹಾಕುವ ತೆನೆಯ ಹೊರೆಗೆ ಶಿವಮೊಗ್ಗ ಬಾಗಗಳಲ್ಲಿ 'ನೆರಗುಹಾಕುವುದು' ಎನ್ನುತ್ತಾರೆ. ಹಾಗೆಯೇ ಚಿಕ್ಕಮಗಳೂರಿನ ಕಡೆಯ ಮಂದಿ 'ಹಡ್ಲು ಹಾಕುವುದು' ಎನ್ನುತ್ತಾರೆ. ಮುಂದೆ ಮೇಟಿಗೆ ಅಯ್ದು ಅತವಾ ಆರು ಎತ್ತುಗಳನ್ನು ಬಿಗಿದು ಹಡ್ಲಿನ ಸುತ್ತ ನಡೆಸಲಾಗುತ್ತದೆ. ಆ ಹೊತ್ತಲ್ಲಿ ಬತ್ತದ ಕಾಳು ತೆನೆಯಿಂದ ಬೇರೆಯಾಗುತ್ತದೆ. ಹೀಗೆ ಕೆಲ ಹೊತ್ತಿನ ಬಳಿಕ ಎತ್ತನ್ನು ಬದಿಗೆ ಕಟ್ಟಿ ಹಡ್ಲನ್ನು ಮಗುಚಿ ಹಾಕಲಾಗುತ್ತದೆ. ತೆನೆಯಿಂದ ಕಾಳು ಬೇರಾಗದೇ ಅಡಿಯಲ್ಲೇ ಉಳಿದಿದ್ದರೆ ಮತ್ತೆ ಅದೇ ರೀತಿಯಾಗಿ ಮೇಟಿಗೆ ದನವನ್ನು ಕಟ್ಟಿ ಹಡ್ಲಿನ ಸುತ್ತ ನಡೆಸಲಾಗುತ್ತದೆ. ಇದು ಒಂದು ರೀತಿಯಲ್ಲಿ ತೆನೆಯಿಂದ ಕಾಳನ್ನು ಬೇರಾಗಿಸುವ ಬಗೆ.

ಮತ್ತೆ ಕೆಲವು ಕಡೆಗಳಲ್ಲಿ ದೊಡ್ಡ ಗುಂಡು ಗಾಲಿಯ ಎರಡೂ ಬದಿಗೆ ಮರದ ಹಲಗೆಯನ್ನು ಕಟ್ಟಿ ಅದನ್ನು ಹಡ್ಲಿನ ಮೇಲೆ ಎತ್ತಿನಿಂದ ಎಳೆಸಲಾಗುತ್ತದೆ. ಈ ಎಲ್ಲಾ ಕೆಲಸದ ಬಳಿಕ ಹುಲ್ಲನ್ನು ಎತ್ತಿ ಕಣದ ಬದಿಯಲ್ಲಿ ಇರಿಸಿ ತೆನೆಯಿಂದ ಉದುರಿದ ಬತ್ತದ ಕಾಳನ್ನು ರಾಶಿ ಮಾಡಲಾಗುತ್ತದೆ. ಹೀಗೆ ಹುಲ್ಲನ್ನು ಬೇರಾಗಿರಿಸುವುದನ್ನು 'ಹುಲ್ಲು ಬೀಸುವುದು' ಎನ್ನುತ್ತಾರೆ ಮತ್ತು ಈ ಕೆಲಸವನ್ನು ಹೆಚ್ಚಾಗಿ ರಾತ್ರಿಯ ಬೆಳದಿಂಗಳ ಹೊತ್ತಿನಲ್ಲಿ ಇಟ್ಟುಕೊಂಡಿರುತ್ತಾರೆ. ಇದರ ಬಳಿಕ ಮುಂಜಾವಿನ ತಂಪು ಗಾಳಿಯಲ್ಲಿ ರಾಶಿ ಮಾಡಿಟ್ಟ ಬತ್ತದ ಕಾಳನ್ನು, ಮುಟ್ಟಲನ್ನು ಬಳಸಿಕೊಂಡು ಕೇರಲಾಗುತ್ತದೆ. ಮುಟ್ಟಲಿಗೆ ನಾವು ಆಡುನುಡಿಯಲ್ಲಿ ಕೇರುವ ಮರ ಎಂದು ಕೂಡ ಹೇಳುವುದುಂಟು.



ಅಂದರೆ ಇಲ್ಲಿ ಮುಟ್ಟಲಿನಲ್ಲಿ ಬತ್ತದ ಬೀಜವನ್ನು ತೆಗೆದುಕೊಂಡು ಬೀಸಲಾಗುತ್ತದೆ. ಗಾಳಿ ಬೀಸುವ ದಿಕ್ಕನ್ನು ತಿಳಿಯಲು ಒಂದು ಕೋಲಿಗೆ ಹಗ್ಗವನ್ನು ಕಟ್ಟಿ ಆ ಹಗ್ಗದ ತುದಿಗೆ ಒಂದು ನೀರ್ಕರಿಯರಕದ ಹಾಳೆಯನ್ನು ಕಟ್ಟಲಾಗುತ್ತದೆ. ಗಾಳಿಯ ಬೀಸುವ ಕಡೆಗೇ ಆ ನೀರ್ಕರಿಯರಕ ಕೂಡ ಹಾರುವುದರಿಂದ ಗಾಳಿಯ ದಿಕ್ಕನ್ನು ಗುರುತಿಸಲು ನೆರವಾಗುತ್ತದೆ. ಹೀಗೆ ಗಾಳಿಯು ಬೀಸುವ ದಿಕ್ಕಿಗೆ ಸರಿಹೊಂದುವಂತೆ ನಿಂತುಕೊಂಡು ಮುಟ್ಟಲಿನಲ್ಲಿ ಬತ್ತದ ಕಾಳನ್ನು ಬೀಸಲು ಶುರುವಿಡುತ್ತಾರೆ. ಹೀಗೆ ಬೀಸುವಾಗ ಜಳ್ಳು ಒಂದು ಕಡೆಗೆ, ಹೊಟ್ಟು ಒಂದು ಕಡೆಗೆ, ಮತ್ತು ಬತ್ತ ಒಂದು ಕಡೆ ಬೇರಾಗುತ್ತವೆ. ಇಲ್ಲಿ ಜಳ್ಳು ಎಂದರೆ ನೆವೆಯಾದ ಬತ್ತ, ಹೊಟ್ಟು ಎಂದರೆ ಸಿಪ್ಪೆ ಕಸ. ಹಾಗೆಯೇ ಬೇರಾದ ಮೂರೂ ಬಗೆಯನ್ನು ಬೇರೆಯದಾಗಿಯೇ ತೆಗೆದು ಜಳ್ಳಿನ ಒಂದು ಬಾಗ, ಹೊಟ್ಟಿನ ಒಂದು ಬಾಗ ಮತ್ತು ಗಟ್ಟಿ ಬತ್ತದ ಒಂದು ರಾಶಿಯನ್ನು ಮಾಡಲಾಗುತ್ತದೆ. ಹೀಗೆ ರಾಶಿ ಮಾಡಿದ ಗಟ್ಟಿ ಬತ್ತದ ಕಾಳಿನಲ್ಲಿರುವ ದೂಳನ್ನು 'ಕೊಂಗ'ದಿಂದ ತೆಗೆಯಲಾಗುತ್ತದೆ. ಹೀಗೆ ಬತ್ತದ ಕಾಳಿನಿಂದ ದೂಳು ತೆಗೆದ ಬಳಿಕ ಗೋರುಮಣೆಯಲ್ಲಿ ಗೋರಿ ಒಟ್ಟುಗೂಡಿಸಿ 'ಮೆರ್ಕ್ಯೋಲಿ'ನಲ್ಲಿ ಕಾಲ್ಗಟ್ಟಲಾಗುತ್ತದೆ. ಅಂದರೆ ಬತ್ತದ ರಾಶಿಯ ಸುತ್ತ ಕೋಲಿನಿಂದ ಗೆರೆ ಎಳೆಯುವ ನಿಯಮ.

ಈ ರೀತಿಯಾಗಿ ರಾಶಿ ಮಾಡಿದ ಬತ್ತದ ಕಾಳಿನ ನಡುವೆ ಗಣಪತಿಯನ್ನು ಇರಿಸಿದರೆ, ಮತ್ತೆ ಕೆಲವರು ತಮ್ಮ ಮನೆ ದೇವರನ್ನು ನೆನೆಯಲು ಕಳಶವನ್ನು ಇರಿಸುತ್ತಾರೆ. ಹಾಗೆಯೇ ಶಿವಮೊಗ್ಗದ ಕೆಲವು ಬಾಗಗಳಲ್ಲಿ 'ಮುತ್ತುಗದ ಹೂವ'ನ್ನು ಬತ್ತದ ರಾಶಿಯ ನಡುವೆ ಇಡಲಾಗುತ್ತದೆ, ಇದರ ಜೊತೆಗೆ ಕಟಾವಿನ ಹೊತ್ತಲ್ಲಿ ತೆಗೆದಿರಿಸಿದ ಮೀಸಲುತೆನೆ, ಒಕ್ಕಲಾಟಕ್ಕೆ ಬಳಸುವ ಕೊಂಗ, ಮುಟ್ಟಲಿ, ಗೋರುಮಣೆ, ಮೆರ್ಕ್ಯೋಲು ಸೇರಿದಂತೆ ಹೊಲಗೆಯ್ಮೆಯಲ್ಲಿ ಬಳಸಿದ ಎಲ್ಲಾ ವಸ್ತುಗಳನ್ನು ಬತ್ತದ ರಾಶಿಯ ಮೇಲಿಟ್ಟು ಪೂಜಿಸಲಾಗುತ್ತದೆ. ಬಳಿಕ ಆ ಮನೆಗೆ ಒಂದು ವರುಶಕ್ಕೆ ಬೇಕಾಗುವಶ್ಟು ಬತ್ತದ ಕಾಳನ್ನು ತೆಗೆದು 'ಪಣತ'ದಲ್ಲಿ ಕೂಡಿಡಲಾಗುತ್ತದೆ. ಮತ್ತೆ ಉಳಿದದ್ದನ್ನು ಮೂಟೆಗಳಲ್ಲಿ ಕಟ್ಟಿಡಲಾಗುತ್ತದೆ. ಆ ಮೂಲಕ ಒಕ್ಕಲಾಟಕ್ಕೆ ತೆರೆಬೀಳುತ್ತದೆ.

ಆದರೆ ಒಕ್ಕಲಾಟ ಮುಗಿದ ಬಳಿಕ ಒಂದಶ್ಟು ಬತ್ತವನ್ನು ದೇವರ ಗುಡಿಗೆ ನೀಡಲಾಗುತ್ತದೆ. ಅಲ್ಲಿ ಅದಕ್ಕೆ ಬೇಕಾದ ಪೂಜೆಯ ವಿದಾನಗಳೆಲ್ಲಾ ನಡೆದ ಬಳಿಕ ಮನೆಗೆ ತಂದು ಅದರಲ್ಲಿ ಅನ್ನ ಮಾಡಲಾಗುತ್ತದೆ. ಇದನ್ನು 'ಹೊಸಕ್ಕಿ ಅನ್ನ' ಎನ್ನುವರು. ಆ ದಿನ ಮನೆಯಲ್ಲಿ ಬಾಡೂಟ ಮಾಡಿ ತಮ್ಮ ಒಡನಾಡಿಗಳನ್ನು ಮನೆಗೆ ಊಟಕ್ಕೆ ಕರೆಸಿಕೊಳ್ಳುತ್ತಾರೆ. ಆ ದಿನ ಮಾಡುವ ಹೊಸಕ್ಕಿಯ ಅನ್ನವನ್ನು ಹಿತಾರುಗಳಿಗೆ ಎಡೆಯಿಟ್ಟು ಮೊದಲು ಮನೆಯ ಹಿರಿಯರು ಅನ್ನವನ್ನು ಸೇವಿಸಿದ ಬಳಿಕ ಮನೆಯ ಇತರರು ಸೇವಿಸುತ್ತಾರೆ. ಇಲ್ಲಿಂದ ಆ ವರುಶದ ಅಕ್ಕಿ ಬಳಕೆಗೆ ಬರುತ್ತದೆ.

(***ಚಿತ್ರ ಸೆಲೆ:*** **sundayobserver**, **michaelfoleyphotography**, )